# ತಪೋವಾಣಿ

ಸಂಪುಟ 17 ಸಂಚಿಕೆ 01 | ಜನವರಿ 2020 | ರೂ.25


## ಅನಿಸಿಕೆಗಳು

### ಗುರೂಜಿ ಕೃಷ್ಣಾನಂದ

**ಅನು: ಚಂಪಾ**

**(ಹಿಂದಿನ ವಾರ್ತಾಪತ್ರಗಳಿಂದ ಆಯ್ದ ಭಾಗಗಳು – ಆಗಸ್ಟ್ 2008ರ ಸಂಚಿಕೆ)**

ಅನೇಕ ಜನರು, ಅದರಲ್ಲೂ ಹೆಚ್ಚಾಗಿ ಪಾಶ್ಚಿಮಾತ್ಯರು ಬೇರೆ ಬೇರೆ ಪ್ರಪಂಚಗಳ ಆಕರಗಳಿಂದ ಜ್ಞಾನವನ್ನು ಕೆಳಗೆ ತರುತ್ತಾರೆ. ಭೌತ ವಿಜ್ಞಾನಿಗಳು ಅರ್ಥಮಾಡಿಕೊಳ್ಳದ ಸೃಷ್ಟಿ, ಚೈತನ್ಯಗಳು, ಭೂಮಿಯಾಚೆಗಿನ ಜೀವನ, ಬೆಳಕಿನ ಜೀವಿಗಳು ಹಾಗೂ ಇನ್ನೂ ಅನೇಕ ವಾಸ್ತವಗಳ ಬಗ್ಗೆ ಅವರು ನಮಗೆ ಹೆಚ್ಚಿನ ಜ್ಞಾನವನ್ನು ಕೊಟ್ಟಿದ್ದಾರೆ. ಈ ಜ್ಞಾನ ಇನ್ನೂ ಸಾಮಾನ್ಯ ಜನರನ್ನು ತಲುಪಿಲ್ಲ. ಎಂದಿನಂತೆ ಧಾರ್ಮಿಕರಿಗೆ ಹೊಸ ಜ್ಞಾನದ ಅರಿವಿಲ್ಲ. ಧಾರ್ಮಿಕ ಮುಖಂಡರು ತಮ್ಮ ಹಿಂಡನ್ನು ಕಟ್ಟಿಕೊಳ್ಳುವುದರಲ್ಲಿ ಮತ್ತು ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸಿಕೊಳ್ಳುವುದರಲ್ಲಿ ನಿರತರಾಗಿದ್ದಾರೆ. ನವಯುಗದ ಕಾರ್ಯಕರ್ತರು ಜ್ಞಾನವನ್ನು ಹರಡುತ್ತ ಮನುಕುಲವನ್ನು ಬೆಳಕು ಮತ್ತು ಪ್ರೇಮದಿಂದ ಕೂಡಿದ ನವಯುಗದತ್ತ ನಡೆಸಲು ಹೆಣಗುತ್ತಿದ್ದಾರೆ.

ಅಮರರವರು ಚಾನಲ್ ಆಗಿರಲಿಲ್ಲ. ಮೇಲಿನಿಂದ ಬಂದ ಜ್ಞಾನವನ್ನು ಪಡೆದುಕೊಳ್ಳದೆ, ತಾವೇ ನೇರವಾಗಿ ಅದನ್ನು ಸಂಗ್ರಹಿಸಿದರು. ಅವರು ಉನ್ನತ ಲೋಕಗಳಿಗೆ ದೊಡ್ಡ ಪ್ರಮಾಣದಲ್ಲಿ ಪ್ರಯಾಣ ಮಾಡಿದರು, ಅಲ್ಲಿ ಅವರು ಅನೇಕ ಋಷಿಗಳನ್ನು, ಬೆಳಕಿನ ಜೀವಿಗಳನ್ನು ಮತ್ತು ದಿವ್ಯ ವ್ಯಕ್ತಿಗಳನ್ನು ಭೇಟಿಯಾಗಿ ಅವರಿಂದ ಜ್ಞಾನವನ್ನು ಸಂಗ್ರಹಿಸಿದರು. ನೇರ ಗ್ರಹಿಕೆಯಿಂದಲೂ ಅವರು ಜ್ಞಾನವನ್ನು ಸಂಗ್ರಹಿಸಿದರು. ಅವರು ಸೃಷ್ಟಿ, ಚೈತನ್ಯಗಳು, ಸಾವಿನಾಚೆಯ ಜೀವನ, ನಮ್ಮ ಬ್ರಹ್ಮಾಂಡ, ದಿವ್ಯ ಬ್ರಹ್ಮಾಂಡ, ದಿವ್ಯ ವ್ಯಕ್ತಿಗಳು ಮತ್ತು ಇನ್ನೂ ಅನೇಕ ವಾಸ್ತವಗಳನ್ನು ಕುರಿತ ಅಮೂಲ್ಯ ಜ್ಞಾನವನ್ನು ಕೆಳಗೆ ತಂದರು.

ಎಲ್ಲ ವಾಸ್ತವಗಳ ಬಗ್ಗೆ ಈ ಭೂಮಿಯ ಮೇಲೆ ಜ್ಞಾನ ಭಂಡಾರವೇ ಇತ್ತು. ನಾವು 5000 ವರ್ಷಗಳ ಹಿಂದೆ ಕತ್ತಲ ಯುಗವನ್ನು ಪ್ರವೇಶಿಸಿದಾಗ ಕ್ರಮೇಣವಾಗಿ ಬಹ್ವಂಶದ ಜ್ಞಾನವನ್ನು ಕಳೆದುಕೊಂಡೆವು, ಏಕೆಂದರೆ ನಮ್ಮ ಸಾಮರ್ಥ್ಯಗಳು ಕುಂಠಿತಗೊಳ್ಳತೊಡಗಿದ್ದರಿಂದ ಅವುಗಳನ್ನು ಹಿಡಿದಿಟ್ಟುಕೊಳ್ಳಲಾರದಾಗಿದ್ದೆವು. ನಮ್ಮ ಉಪನಿಷತ್ತುಗಳು ಮತ್ತು ಇತರ ಧರ್ಮಗ್ರಂಥಗಳಲ್ಲಿ ಅಲ್ಪಸ್ವಲ್ಪ ಜ್ಞಾನವಿದ್ದರೂ ಮುಂದಿನ ಯುಗಕ್ಕೆ ನಾವು ಸಾಗಲು ಅವು ಸಾಕಾಗುವುದಿಲ್ಲ. ಅವುಗಳಲ್ಲಿ ಅಲ್ಲಲ್ಲಿ ಬಿಟ್ಟುಹೋದ ಭಾಗಗಳಿವೆ. ಜಗತ್ತಿನೆಲ್ಲೆಡೆಯಿಂದ ಸಂಗ್ರಹವಾದ ಹೊಸ ಜ್ಞಾನದಿಂದ ಈ ಭಾಗಗಳನ್ನು ತುಂಬಲು ಹಾಗೂ ವಾಸ್ತವಗಳನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲು, ಗುರುತರವಾದ ಕೆಲಸವನ್ನು ಆದಷ್ಟು ಬೇಗ ಆರಂಭಿಸಬೇಕಿದೆ. ಆಗ ನಮಗೆ ನವಯುಗಕ್ಕೆ ಕಾಲಿಡಲು ಸುಲಭವಾಗುತ್ತದೆ.

ನಾನು ಕ್ಲಾಸಿನಲ್ಲಿ ಮಾತನಾಡುವಾಗ ಎಲ್ಲರನ್ನೂ ಕುರಿತು ಹೇಳುತ್ತೇನೆ, ಸಾಧನೆಯ ಎಲ್ಲ ಹಂತಗಳಲ್ಲಿರುವ ವಿದ್ಯಾರ್ಥಿಗಳಿಗೂ, ಅಂದರೆ ಆರಂಭಿಗರಿಂದ ಉನ್ನತಮಟ್ಟದಲ್ಲಿರುವವರಿಗೆ. ಪ್ರತಿಯೊಂದು ಹಂತಕ್ಕಾಗಿ ಪ್ರತ್ಯೇಕ ಕ್ಲಾಸುಗಳಿಲ್ಲ. ಆದ್ದರಿಂದ ಪ್ರತಿಯೊಬ್ಬ ವಿದ್ಯಾರ್ಥಿಯೂ ಎಲ್ಲವನ್ನೂ ಕೂಡಲೇ ಅರ್ಥಮಾಡಿಕೊಳ್ಳಬೇಕೆಂದು ಅಥವಾ ಒಪ್ಪಿಕೊಳ್ಳಬೇಕೆಂದು ನಾನು ನಿರೀಕ್ಷಿಸುವುದಿಲ್ಲ. ಬಹುಶಃ ಒಂದಲ್ಲಾ ಒಂದು ದಿನ ಪ್ರತಿಯೊಬ್ಬರೂ ಅರ್ಥಮಾಡಿಕೊಳ್ಳುತ್ತಾರೆ.

ಮಾತನಾಡುವಾಗ, ಕಲಿಸುವಾಗ, ತರಬೇತಿ ನೀಡುವಾಗ ಸಹಜವಾಗಿಯೇ ವಿಭಿನ್ನ ರೀತಿಯ ವಿದ್ಯಾರ್ಥಿಗಳನ್ನು ನೋಡುತ್ತೇನೆ: ನನ್ನನ್ನು ಈಗಲೇ ಅರ್ಥಮಾಡಿಕೊಳ್ಳುವವರು, ಸ್ವಲ್ಪ ಕಾಲಾನಂತರ ಅರ್ಥಮಾಡಿಕೊಳ್ಳುವವರು ಹಾಗೂ ಅರ್ಥವನ್ನೇ ಮಾಡಿಕೊಳ್ಳದಿರುವವರು. ಈಗಿರುವ ಜ್ಞಾನಕ್ಕಿಂತ ದಶಕಗಳಷ್ಟು ಹಿಂದೆ ಇರುವವರನ್ನೂ ನೋಡುತ್ತೇನೆ. ಅವರು ಹೊಸ ಜ್ಞಾನವನ್ನು ಕಂಡು ಬೆರಗಾಗುತ್ತಾರೆ. ಆಷಾಢದಲ್ಲಿ ರಾಹುಕಾಲವಿರುವುದಿಲ್ಲ ಎಂದು ನಾನು ಹೇಳಿದಾಗ ಅವರು ಗಾಬರಿಯಾಗುತ್ತಾರೆ!

---

**ಜ್ಯೋತಿಕಾರ್ಯದ ವಾರ್ತಾಪತ್ರ**



ಮಹರ್ಷಿ ಅಮರ (1919-1982)

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದರು.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ-ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

- ★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
- ★ ಪ್ರೀತಿ ನಮ್ಮ ಸ್ವಭಾವ.
- ★ ಮೌನ ನಮ್ಮ ಭಾಷೆ.
- ★ ಧ್ಯಾನ ನಮ್ಮ ಮಾರ್ಗ.
- ★ ಈ ಪ್ರಪಂಚ ನಮ್ಮ ಆಶ್ರಮ.
- ★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.


**ಮಾನಸ ಫೌಂಡೇಶನ್ (ರಿ)**

ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560077. ಭಾರತ.

✆ 99000 75280 (ಬೆಳಗ್ಗೆ 10ರಿಂದ ಸಂಜೆ 5)

ಇ-ಮೇಲ್: info@lightagemasters.com ವೆಬ್‌ಸೈಟ್: www.lightagemasters.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ**

ಪ್ರಾಥಮಿಕ ತರಗತಿ – ಬೆಳಿಗ್ಗೆ 10 ರಿಂದ 11

ರೆಗ್ಯುಲರ್ ತರಗತಿ – ಬೆಳಿಗ್ಗೆ 11 ರಿಂದ ಮಧ್ಯಾಹ್ನ 1

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ
ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ
ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶನಿವಾರ** (ಬೆಳಿಗ್ಗೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ
(ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ,
ಬನಶಂಕರಿ 2ನೇ ಹಂತ

### ಆನೇಕಲ್‌ನಲ್ಲಿ

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)
**ಸಪ್ತರ್ಷಿ ಧ್ಯಾನ ಕೇಂದ್ರ, ರಾಜರಾಜೇಶ್ವರಿ ಬಡಾವಣೆ**

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ) ಪ್ರಕಾಶ್‌ಮಾರ್ಗ್ (ಮರಾಠಿ) ವಾರ್ತಾಪತ್ರದ ವಾರ್ಷಿಕ ಚಂದಾ ರೂ. 300/– ಡಿಡಿಯನ್ನು**

**'Manasa Light Age Foundation'**

**ಹೆಸರಿನಲ್ಲಿ ಕಳುಹಿಸಬೇಕು.**
**ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.



**29–10–2019ರಂದು ತಪೋನಗರದ ನಿವಾಸಿಗಳು ಒಟ್ಟಿಗೆ ಸೇರಿ ದೀಪಾವಳಿಯನ್ನು ಆಚರಿಸಿದರು**

### ಸುದ್ಧಿ–ಸೂಚನೆಗಳು

- 12–01–2020ರಂದು ಹೊಸ ಶಂಬಲ ಗ್ರೂಪ್ ಪ್ರಾರಂಭವಾಗುತ್ತದೆ. ಚಕ್ರ ಚಾಲನೆಯ ಹಂತದ ಸಾಧನೆಯನ್ನು ಪೂರ್ಣಗೊಳಿಸಿರುವ ವಿದ್ಯಾರ್ಥಿಗಳು ಶಂಬಲ ಗ್ರೂಪ್‌ಅನ್ನು ಸೇರಬಹುದು. ಹೊಸ ಶಂಬಲ ಗ್ರೂಪ್‌ಗೆ ಸೇರಲು ಬಯಸುವವರು 31–12–2019 ರೊಳಗೆ ಮಾನಸ ಆಫೀಸಿನಲ್ಲಿ ನೊಂದಾಯಿಸಬಹುದು. ದೂರಕಲಿಕೆ ವಿದ್ಯಾರ್ಥಿಗಳು ಕೂಡ ಸೇರಬಹುದು. ಶಂಬಲ ಗ್ರೂಪ್‌ನಲ್ಲಿ ಈಗಾಗಲೇ ಸದಸ್ಯರಾಗಿರುವವರು ಕೂಡ 31–12–2019ರ ಒಳಗೆ ತಮ್ಮ ಹೆಸರುಗಳನ್ನು ಮಾನಸ ಆಫೀಸಿನಲ್ಲಿ ನೊಂದಾಯಿಸಿಕೊಳ್ಳುವ ಮೂಲಕ ತಮ್ಮ ಸದಸ್ಯತ್ವವನ್ನು ನವೀಕರಿಸಿಕೊಳ್ಳಬೇಕು.
- 31–01–2020ನೇ ಶುಕ್ರವಾರದಂದು 'ವಿಶ್ವ ಚಾನಲ್ಸ್ ದಿನ' ವನ್ನು ಆಚರಿಸಲಾಗುತ್ತದೆ. ಶಾಲೆಗಳನ್ನು ಸಂಪರ್ಕಿಸಿ, ಲೈಟ್ ಚಾನಲಿಂಗ್ ಸೆಷನ್‌ಗಳನ್ನು ನಡೆಸಲು ನಮಗೆ ಹೆಚ್ಚಿನ ಕಾರ್ಯಕರ್ತರ ಅಗತ್ಯವಿದೆ. ಈ ದಿನ ಕೆಲಸ ಮಾಡಲು ಇಚ್ಛಿಸುವ ಸಾಧಕರು ತಮ್ಮ ಹೆಸರನ್ನು ಶ್ರೀ ಮನೋಜ್ ಚೋಪ್ರಾರವರಿಗೆ ದಯವಿಟ್ಟು ಕೊಡಬೇಕೆಂದು ಕೋರುತ್ತೇವೆ.
- 02–02–2020 ರಂದು ತಪೋನಗರದಲ್ಲಿ ಮಹರ್ಷಿ ಅಮರರವರ ಜಯಂತಿ ಕಾರ್ಯಕ್ರಮವನ್ನು ಆಚರಿಸಲಾಗುವುದು. ನಿಮ್ಮನ್ನು ಈ ವಿಶೇಷ ಕಾರ್ಯಕ್ರಮಕ್ಕೆ ಸ್ವಾಗತಿಸುತ್ತೇವೆ. ಇದರಲ್ಲಿ ಭಾಗವಹಿಸಲು ಇಚ್ಛಿಸುವವರು, 31–01–2020 ರ ಒಳಗೆ ತಮ್ಮ ಹೆಸರನ್ನು ಮಾನಸ ಆಫೀಸಿನಲ್ಲಿ ನೋಂದಾಯಿಸಲು ಕೋರುತ್ತೇವೆ.
- 25–12–2019 ರಂದು, ಜೀಸಸ್ ಕ್ರೈಸ್ಟ್‌ಗೆ ತಮ್ಮ ಪ್ರೀತಿ ಮತ್ತು ಗೌರವವನ್ನು ಅರ್ಪಿಸಲು ಧ್ಯಾನಿಗಳು ತಪೋನಗರದ ಧ್ಯಾನಮಂದಿರದಲ್ಲಿ ಸೇರಿ ಇಡೀ ವಿಶ್ವಕ್ಕೆ ಬೆಳಕನ್ನು ಚಾನಲ್ ಮಾಡಿದರು.
- 2020ನೇ ವರ್ಷದ ಮಾನಸ ಕ್ಯಾಲೆಂಡರ್ Android platform ನಲ್ಲೂ ಲಭ್ಯವಿದೆ. Android ಬಳಸುವವರು ನಮ್ಮ ವೆಬ್‌ಸೈಟ್‌ನಿಂದ ಇದನ್ನು ಡೌನ್‌ಲೋಡ್ ಮಾಡಬಹುದು ಅಥವ Google Play Store ನಿಂದ 'Manasa Calendar' ಅನ್ನು ಹುಡುಕಿ ಅಪ್ಡೇಟ್ ಮಾಡಬಹುದು.

ಈಗ Speaking Tree ಯಲ್ಲಿ ಗುರೂಜಿಯವರನ್ನು ಮಾಸ್ಟರ್‌ಗಳ ಪಟ್ಟಿಯಲ್ಲಿ ಸೇರಿಸಲಾಗಿದೆ. ಅವರ ಬ್ಲಾಗ್ ಓದಲು ಮತ್ತು ಅವರ ವಿಡಿಯೋಗಳನ್ನು ನೋಡಲು www.speakingtree.in ಗೆ ಭೇಟಿನೀಡಿ.

### ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 03 | ಶುಕ್ರ | ಶುಕ್ಲ ಅಷ್ಟಮಿ |
| 05 | ಭಾನು | ಶುಕ್ಲ ದಶಮಿ |
| 10 | ಶುಕ್ರ | ಪೂರ್ಣಿಮಾ<br>ಚಂದ್ರ ಗ್ರಹಣ:<br>ರಾತ್ರಿ 10:37 ರಿಂದ 2:42 |
| 15 | ಬುಧ | ಉತ್ತರಾಯಣ ಆರಂಭ<br>ಮಕರ ಸಂಕ್ರಾಂತಿ |
| 17 | ಶುಕ್ರ | ಕೃಷ್ಣ ಅಷ್ಟಮಿ |
| 23 | ಗುರು | ಮಾಸ ಶಿವರಾತ್ರಿ |
| 24 | ಶುಕ್ರ | ಅಮಾವಾಸ್ಯೆ |
| 31 | ಶುಕ್ರ | ವಿಶ್ವ ಚಾನಲ್ಸ್ ದಿನ |

### ತಪೋನಗರದಲ್ಲಿ ಅಮರ ಜಯಂತಿ ಕಾರ್ಯಕ್ರಮ

**ಭಾನುವಾರ, 02–02–2020**

| | |
|---|---|
| ಬೆಳಿಗ್ಗೆ 11 ಕ್ಕೆ | ಸ್ವಾಗತ<br>ಭಾಷಣಗಳು<br>ವಿಶೇಷ ಧ್ಯಾನ |
| ಮಧ್ಯಾಹ್ನ 12.30ಕ್ಕೆ | ಪ್ರಸಾದ |

### ಈ ತಿಂಗಳು ತಪೋನಗರದಲ್ಲಿ

| | |
|---|---|
| ಭಾನುವಾರಗಳು : | ಉಪನ್ಯಾಸಗಳು : ಬೆಳಿಗ್ಗೆ 11–12<br>ಲೈಟ್ ಚಾನಲಿಂಗ್:ಮಧ್ಯಾಹ್ನ 12–1 |
| 12–1–2020 | ಮಧ್ಯಾಹ್ನ 2ಕ್ಕೆ ಶಂಬಲ ಗ್ರೂಪ್ ಸಂಧಿಸುತ್ತದೆ<br>ಮಧ್ಯಾಹ್ನ 2.30ಕ್ಕೆ ಲೈಟ್ ಚಾನಲ್ ಕಾರ್ಯಕರ್ತರ ಸಭೆ |
| 19–1–2020 | ಮಧ್ಯಾಹ್ನ 2ಕ್ಕೆ 'ರಾ' ಗ್ರೂಪ್ ಸಂಧಿಸುತ್ತದೆ |

### ಆನೇಕಲ್ ಕಾರ್ಯಕ್ರಮ

ಅಮರ ಜಯಂತಿ ಕಾರ್ಯಕ್ರಮವನ್ನು ಆನೇಕಲ್‌ನ ನಮ್ಮ ಸಪ್ತರ್ಷಿ ಧ್ಯಾನ ಕೇಂದ್ರದಲ್ಲಿ 01–02–2020ರಂದು ಬೆಳಿಗ್ಗೆ 11.30 ಘಂಟೆಗೆ ಆಯೋಜಿಸಲಾಗಿದೆ.

ಜನವರಿ 10ರಂದು, ರಾತ್ರಿ 10:37 ರಿಂದ ಬೆಳಿಗ್ಗೆ 2:42 ರವರೆಗೆ ಚಂದ್ರ ಗ್ರಹಣವಿದೆ. ದಯವಿಟ್ಟು ಗ್ರಹಣದ ಪೂರ್ತಿ ಸಮಯದಲ್ಲಿ ಇಡೀ ಪ್ರಪಂಚಕ್ಕೆ ಬೆಳಕನ್ನು ಚಾನಲ್ ಮಾಡಿ.

# ತಪೋನಗರದಲ್ಲಿ ಸಹಸ್ರ ದೀಪೋತ್ಸವ

ವೈಶಾಲಿ ಜೋಷಿ; ಅನು: ಸುಜಾತ ವಿ

ಅಕ್ಟೋಬರ್ 29 ರಂದು ತಪೋನಗರದಲ್ಲಿ 'ದಿಯಾ'ಗಳು ಮತ್ತು ವಿದ್ಯುತ್ ದೀಪಗಳನ್ನು ಬಳಸಿಕೊಂಡು ಅಪೂರ್ವ ರೀತಿಯಲ್ಲಿ ದೀಪಾವಳಿಯನ್ನು ಆಚರಿಸಲಾಯಿತು. ಆ ಸಂದರ್ಭಕ್ಕೆ ಸಂಬಂಧಿಸಿದ ಯೋಜನೆ ಒಂದು ವಾರ ಮುಂಚಿತವಾಗಿಯೇ ಶುರುವಾಯಿತು. ಮಾನಸ ಹಾಗೂ ಅಂತರ್ ಮಾನಸದಲ್ಲಿರುವ ಪ್ರತಿಯೊಂದು ಕಟ್ಟಡದ ಅಲಂಕಾರಕ್ಕೆ ಬೇಕಾಗಿರುವ ವಸ್ತುಗಳಾದ ದಿಯಾ, ಮೇಣದಬತ್ತಿ, ರಂಗೋಲಿ, ಹೂವುಗಳು ಮುಂತಾದವುಗಳನ್ನು ಕೊಳ್ಳುವ ವಿವರವಾದ ಯೋಜನೆ ಮಾಡಲಾಯಿತು.

ಹಿಂದಿನ ದಿನ ಕಟ್ಟಡಗಳ ಹೊರಗೆ ವಿದ್ಯುತ್ ದೀಪಗಳನ್ನು ಸ್ಥಾಪಿಸುವ ಮೂಲಕ; ಕಟ್ಟಡಗಳ ಒಳಗೆ ಮಧ್ಯದಲ್ಲಿ ಸಾಂಪ್ರದಾಯಿಕ ಎತ್ತರವಾದ ಹಿತ್ತಾಳೆಯ ದೀಪವನ್ನಿಟ್ಟು ಸುತ್ತಲೂ ಸುಂದರವಾದ ಬಣ್ಣಗಳಿಂದ ತುಂಬಿದ ರಂಗೋಲಿಯನ್ನು ಬಿಡಿಸುವ ಮೂಲಕ; ಕಟ್ಟಡಗಳ ಅಲಂಕಾರ ಶುರುವಾಯಿತು, ಮತ್ತು ಇದು ಮರು ದಿನವೂ ಮುಂದುವರಿಯಿತು. 29ನೇ ತಾರೀಕು ಬೆಳಿಗ್ಗೆ ಹೆಚ್ಚು ನಿವಾಸಿಗಳು ಸೇರಿ ಎಲ್ಲ ಕಟ್ಟಡಗಳಲ್ಲೂ ಸೃಜನಾತ್ಮಕವಾಗಿ ದಿಯಾಗಳನ್ನು ಹಾಗು ಕ್ಯಾಂಡಲ್ ಲೈಟ್‌ಗಳನ್ನು ಜೋಡಿಸಿದರು ಹಾಗೂ ಹೂವುಗಳಿಂದ ಅಲಂಕರಿಸಿದರು.

ಆಗಾಗ ಬಿದ್ದ ತುಂತುರು ಮಳೆಹನಿ ಮತ್ತು ಬಲವಾದ ಗಾಳಿ ನಮ್ಮ ಉತ್ಸಾಹವನ್ನು ಕುಗ್ಗಿಸಲಿಲ್ಲ, ಆದರೆ ಆತಂಕದ ಕ್ಷಣಗಳನ್ನು ತಂದವು, ಇದರಿಂದಾಗಿ ಸಹಾಯಕ್ಕಾಗಿ ನಾವು ವರುಣ ದೇವರಿಗೂ ಹಾಗೂ ವಾಯು ದೇವರಿಗೂ ತೀವ್ರವಾಗಿ ಪ್ರಾರ್ಥಿಸುವಂತಾಯಿತು. ನಮ್ಮ ಪ್ರಾರ್ಥನೆ ಸಫಲವಾಯಿತು, ಸಾಯಂಕಾಲವಾಗುತ್ತಿದ್ದಂತೆ, ಹವಾಮಾನ ನಿರ್ಮಲವಾಯಿತು ಮತ್ತು ಪ್ರಕಾಶಮಾನವಾದ ಸೂರ್ಯ ಕಾಣಿಸಿಕೊಂಡ.

ನಿವಾಸಿಗಳು ಹಬ್ಬದ ಅಂದವಾದ ಬಣ್ಣಬಣ್ಣದ ಉಡುಪುಗಳನ್ನು ಧರಿಸಿಕೊಂಡು ಅಂತರ್–ಮಾನಸದಲ್ಲಿರುವ ವರ್ತುಲವಾದ ಮೆಟ್ಟಿಲುಗಳಿರುವ ಥಿಯೇಟರ್‌ನಲ್ಲಿ ಸೇರಿದ್ದರು ಮತ್ತು ಸಾಯಂಕಾಲ 5.45ಕ್ಕೆ ಲೈಟ್ ಚಾನಲಿಂಗ್ ಮತ್ತು ಉದ್ಘಾಟನಾ ದೀಪವನ್ನು ಜಯಂತ್ ಸರ್ ಬೆಳಗುವ ಮೂಲಕ ಕಾರ್ಯಕ್ರಮ ಆರಂಭವಾಯಿತು. ಅಲ್ಲಿಂದ ನಾವೆಲ್ಲರೂ ಪಕ್ಕದಲ್ಲಿರುವ ಪುರಾತನವಾದ ಶಿವನ ಮಂದಿರದ ಕಡೆಗೆ ಹೋದೆವು. ಭಗವಾನ್ ಶಿವನನ್ನು ಪ್ರಾರ್ಥಿಸಿದ ನಂತರ ನಮಗೆ ನಿರ್ಧರಿತವಾಗಿದ್ದ ಕಟ್ಟಡಗಳಿಗೆ ನಮ್ಮ ತಂಡದವರ ಜೊತೆ ಹೋಗಿ ದಿಯಾಗಳನ್ನು ಹಚ್ಚಿದೆವು. ನಂತರ ಮಾನಸದಲ್ಲಿರುವ ಗುರೂಜಿಯವರ ಸಮಾಧಿಯನ್ನು ತಲುಪಿದೆವು, ಜಯಂತ್ ಸರ್ ಅಲ್ಲಿ ದೀಪ ಬೆಳಗಿದ ನಂತರ ಮುಂಚಿನ ರೀತಿಯಲ್ಲೇ ಎಲ್ಲರೂ ಅವರವರಿಗೆ ನಿಗದಿಯಾಗಿದ್ದ ಆಯಾ ಕಟ್ಟಡಗಳಿಗೆ ತಮ್ಮ ತಂಡದೊಂದಿಗೆ ಹೋಗಿ ದಿಯಾಗಳನ್ನು ಬೆಳಗಿಸಿದರು.

ಸಂತೋಷ ಮತ್ತು ಹಬ್ಬದ ಉತ್ಸಾಹ ಎಲ್ಲೆಡೆ ಗೋಚರಿಸುತ್ತಿತ್ತು ಮತ್ತು ಸಾವಿರಕ್ಕೂ ಹೆಚ್ಚು ದಿಯಾಗಳ ಬೆಳಕು ನಮ್ಮನ್ನು ಒಂದು ಅದ್ಭುತವಾದ ಲೋಕದಲ್ಲಿ ಇರುವಂತೆ ಮಾಡಿತು! ಅಕ್ಟೋಬರ್‌ನಲ್ಲಿ ಹುಟ್ಟಿದ ಎಲ್ಲರೂ ಹುಟ್ಟುಹಬ್ಬದ ಕೇಕ್ ಕಟ್‌ಮಾಡಿದರು, ಭೋಜನ ಮತ್ತು ಗ್ರೂಪ್ ಫೋಟೋದೊಂದಿಗೆ ಆ ಸಂಜೆ ಮುಕ್ತಾಯಗೊಂಡಿತು. ■



## ಲೈಟ್ ಚಾನಲ್ಸ್ ವಿಶ್ವ ಸಂಚಲನ

ಇದು, ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವುದಕ್ಕಾಗಿ ಆತ್ಮಪ್ರಜ್ಞೆಯಲ್ಲಿ ನಡೆಯುವ ಒಂದು ಸಂಚಲನ. ಭಾಷಣಗಳು, ಬಾವುಟಗಳಿಲ್ಲದ, ಬೆಳಕನ್ನು ಚಾನಲ್ ಮಾಡಿದರಷ್ಟೇ ಸಾಕಾಗುವ ಒಂದು ಸಂಚಲನ. ಪದಗಳು ಮಾಡಲಾಗದ ಎಲ್ಲವನ್ನೂ ಬೆಳಕೇ ಮಾಡುತ್ತದೆ.

ನಾವು ಚಾನಲ್ ಮಾಡಿ ಬೆಳಕನ್ನು ಹರಡಿದಾಗ, ಅದು ಬೇರೆಯವರ ಹೃದಯಗಳನ್ನು ಮತ್ತು ಮನೆಗಳನ್ನು ಪ್ರವೇಶಿಸುತ್ತದೆ ಮತ್ತು ಆಲೋಚನೆಗಳು ಮತ್ತು ಭಾವನೆಗಳಲ್ಲಿರುವ ಕತ್ತಲನ್ನು ಪರಿವರ್ತಿಸುತ್ತದೆ. ವ್ಯಕ್ತಿಗಳೊಂದಿಗೆ ಪ್ರಪಂಚವೂ ಪರಿವರ್ತನೆಗೊಳ್ಳುತ್ತದೆ.

ಇದು ಭೌತಿಕ ಬೆಳಕಲ್ಲ, ಆದರೆ ಇದು, ಯಾವುದರಿಂದ ಇಡೀ ಸೃಷ್ಟಿ ಬಂದಿದೆಯೋ ಆ ಅತಿ ಸೂಕ್ಷ್ಮ ಬೆಳಕು. ಈ ಬೆಳಕಿನಲ್ಲಿ ಎಲ್ಲವೂ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ, ಆದರೆ ಎಲ್ಲಾ ಕಡೆ ಇದೆ.

ನಾವು ಪ್ರತಿದಿನ ಎದ್ದಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ಚಾನಲ್ ಮಾಡಿ ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.

ಚಾನಲ್ ಮಾಡಿ ಬೆಳಕನ್ನು ಹರಡುವುದಕ್ಕಾಗಿ, ನಿಮ್ಮ ಮೇಲೆ ಬೆಳಕಿನ ಸಾಗರವೊಂದನ್ನು ಕಲ್ಪಿಸಿಕೊಳ್ಳಿ. ನಂತರ ಈ ಸಾಗರದಿಂದ ಬೆಳಕಿನ ದಪ್ಪ ಕಿರಣವೊಂದು ಕೆಳಬಂದಂತೆ ಕಲ್ಪಿಸಿಕೊಳ್ಳಿ. ಈ ಬೆಳಕು ನಿಮ್ಮನ್ನು ಪ್ರವೇಶಿಸಿ ನಿಮ್ಮ ದೇಹವನ್ನು ಸಂಪೂರ್ಣವಾಗಿ ತುಂಬುತ್ತಿದೆಯೆಂದು ಕಲ್ಪಿಸಿಕೊಳ್ಳಿ. ಒಂದು ನಿಮಿಷ ಈ ಬೆಳಕನ್ನು ಅನುಭವಿಸಿ. ನಂತರ ಈ ಬೆಳಕು ನಿಮ್ಮ ದೇಹದಿಂದ ಹೊರಬಂದು ನಿಧಾನವಾಗಿ ಸುತ್ತಲೂ ಹರಡುತ್ತಾ, ನಿಮ್ಮ ಮನೆ, ಪ್ರದೇಶ, ದೇಶ ಮತ್ತು ಇಡೀ ಪ್ರಪಂಚವನ್ನು ತುಂಬುತ್ತಿದೆ ಎಂದು ಕಲ್ಪಿಸಿಕೊಳ್ಳಿ.

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರವರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಎಲ್ಲರಿಗೂ ಹರಡಿ.

www.lightchannels.comಗೆ ಭೇಟಿ ನೀಡಿ.

## ಶಂಬಲದ ನಿಯಮಗಳು

**ಈ ಏಳು ನಿಯಮಗಳನ್ನು ಶಂಬಲದಲ್ಲಿ ವಾಸಿಸುತ್ತಿರುವ ಜನರು ಅಭ್ಯಾಸ ಮಾಡುತ್ತಾರೆ. ಅವರು ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವನದಲ್ಲಿಯೇ ಬದುಕುತ್ತಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ನಂತರ ಅವುಗಳನ್ನು ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ನಕಾರಾತ್ಮಕತೆಗಳನ್ನು ಗೆಲ್ಲಲು ದೇಹ, ಮನಸ್ಸು ಮತ್ತು ಬುದ್ಧಿಗಳನ್ನು ಸಿದ್ಧಗೊಳಿಸುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡುವುದು.

# ಗುರೂಜಿಯವರ ನುಡಿಗಳು

## ಗುರೂಜಿಯವರ ಭಾಷಣಗಳಿಂದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಸುಧಾಕರ್

ಏಪ್ರಿಲ್ 2006

ಈ ಮಾರ್ಗದಲ್ಲಿ ಬುದ್ಧಿಯ ಮಟ್ಟದ ಜ್ಞಾನವನ್ನು ಮಾತ್ರವೇ ಕೊಡುವುದಿಲ್ಲ, ಧ್ಯಾನಿಗಳನ್ನು ಬುದ್ಧಿಯ ಮಟ್ಟವನ್ನೂ ಮೀರಿ ಕರೆದುಕೊಂಡು ಹೋಗಲು ಪ್ರಯತ್ನಿಸುತ್ತೇವೆ. ನಮಗೆ, ಬುದ್ಧಿಯನ್ನೂ ಮೀರಿದ ಅನುಭವಗಳು ಅತಿಮುಖ್ಯ. ಅನುಭವವಾಗದಿದ್ದರೆ ನಮಗೆ ಅರ್ಥವಾಗುವುದಿಲ್ಲ. ಜ್ಞಾನ ಯೋಗವೆಂದರೆ ಧರ್ಮಶಾಸ್ತ್ರ ಆಧಾರಿತವಾದ ಜ್ಞಾನವೆಂದು ಜನರು ವಿವರಿಸುತ್ತಾರೆ ಮತ್ತು ಅರಿತಿದ್ದಾರೆ. ಅದು ಉಪನಿಷತ್, ಗೀತಾ ಅಥವ ಪವಿತ್ರ ಗ್ರಂಥಗಳ ಜ್ಞಾನದಲ್ಲಿ ಪಾಂಡಿತ್ಯವನ್ನು ಪಡೆಯುವುದು ಎಂದು ತಿಳಿದಿದ್ದಾರೆ. ನಾವಿಲ್ಲಿ ತಿಳಿದಿರುವ ಹಾಗೆ, ಜ್ಞಾನ ಯೋಗವೆಂದರೆ, ನಾವು ನೇರವಾದ ಅನುಭವದಿಂದ ಪಡೆಯುವ ಜ್ಞಾನ. ಇಲ್ಲಿ ನಾವು ಜ್ಞಾನ ಯೋಗವನ್ನು ಅದರ ನಿಜವಾದ ಅರ್ಥದಲ್ಲಿ ಅಭ್ಯಾಸ ಮಾಡುತ್ತೇವೆ.

ಧಾರ್ಮಿಕ ಆಚರಣೆಗಳು ಒಳ್ಳೆಯದು, ಪೂಜೆ ಒಳ್ಳೆಯದು, ಯಾತ್ರೆ ಒಳ್ಳೆಯದು, ಆದರೆ ಅದಷ್ಟೇ ಸಾಲದು; ಬಹುಶಃ ಅದು ಬೇಕಾಗಿಲ್ಲ, ಎನ್ನುವ ವಿಷಯವನ್ನು ಜನರು ಅರ್ಥಮಾಡಿಕೊಳ್ಳುವುದಕ್ಕೆ ನಾವಿಲ್ಲಿ ಸಹಾಯವಮಾಡುತ್ತೇವೆ. ನಮ್ಮ ಸಾಧನೆಯನ್ನು ಮೇಲಿನ ಹಂತಕ್ಕೆ ತೆಗೆದುಕೊಂಡು ಹೋಗಬೇಕು. ಈ ಆಚರಣೆಗಳು, ಪೂಜೆಗಳು ಅಥವ ಯಾತ್ರೆಗಳನ್ನು ಮೀರಿ ಹೋಗಬೇಕೆಂದು ನಾವು ಹೇಳುತ್ತೇವೆ. ಕಲಿಯುಗದಲ್ಲಿ, 5000 ವರ್ಷಗಳ ಕತ್ತಲಿನ ಯುಗದಲ್ಲಿ ಇವುಗಳು ಸಾಕಾಗುತ್ತಿತ್ತು. ಆದರೆ ಈಗ ಇವುಗಳು ಸಾಕಾಗುವುದಿಲ್ಲ.

ಹೊಸ ಸಾಧ್ಯತೆಗಳ ಬಗ್ಗೆ ನಮಗೆ ತಿಳಿದೇ ಇರಲಿಲ್ಲ. ಇಲ್ಲಿ ಕೊಡುವ ಸರಳ ಧ್ಯಾನದ ತಂತ್ರಗಳೊಂದಿಗೆ ನಾವು ದೇವರನ್ನು ಅನುಭವಿಸಬಹುದು ಎಂದು ಋಷಿಗಳು ಈಗ ನಮಗೆ ಹೇಳುತ್ತಾರೆ. ಹಾಗಿರುವಾಗ ನಾವು ದೇವಸ್ಥಾನಗಳಿಗೆ ಹೋಗುವ ಅವಶ್ಯಕತೆಯೇನಿದೆ? ಆದ್ದರಿಂದ ಈ ಮಾರ್ಗದಲ್ಲಿ, ಆಚರಣೆಗಳು ಮತ್ತು ಪೂಜೆಗಳನ್ನು ದಾಟಿಹೋಗಲು ಋಷಿಗಳು ಸಹಾಯಮಾಡುತ್ತಾರೆ. ಇವುಗಳನ್ನು ಮೀರಿ ಮೇಲೆ ಹೋಗಲು ಋಷಿಗಳು ಸಹಾಯ ಮಾಡಲು ಪ್ರಯತ್ನಿಸುತ್ತಾರೆ. ಇದರಿಂದಾಗಿಯೇ ಇದೊಂದು ಬೇರೆ ರೀತಿಯ ಮಾರ್ಗ. ಆದರೆ ಬೇರೆ ಮಾರ್ಗಗಳ ಬಗ್ಗೆ ನಾವು ಎಂದಿಗೂ ಅಪಹಾಸ್ಯ ಮಾಡಬಾರದೆಂಬುದನ್ನು ನಾವೆಲ್ಲರೂ ಎಂದೆಂದಿಗೂ ಮರೆಯಬಾರದು. ಯಾವುದೇ ಮಾರ್ಗವನ್ನೂ ತೆಗಳುವುದು ಬೇಡ. ಪ್ರತಿಯೊಂದು ದಾರಿಯೂ ಒಂದು ದಾರಿ. ನಾವಿಲ್ಲಿ ಹೇಳುತ್ತೇವೆ, "ನಮಗಾಗಲೇ ತಿಳಿದಿರುವ ದಾರಿಗಳನ್ನು ನಾವು ಮೀರಿ ಸಾಗೋಣ."

ಉನ್ನತ ಯೋಗವನ್ನು ನಾವು ಅಭ್ಯಾಸ ಮಾಡೋಣ. ನಾವು ಅನೇಕ ವಿಷಯಗಳನ್ನು ಪರಿಚಯಿಸುವುದರಲ್ಲಿದ್ದೇವೆ. ನಾವು ಈಗಾಗಲೇ ಸಪ್ತರ್ಷಿ ಪ್ರಾಣಾಯಾಮವನ್ನು ಪರಿಚಯಿಸಿದ್ದೇವೆ. ನಾವು ಇನ್ನು ಮುಂದೆ ಇಂತಹ ತಂತ್ರಗಳನ್ನು ಇನ್ನೂ ಹೆಚ್ಚು ಪರಿಚಯಿಸಲಿದ್ದೇವೆ. ಉನ್ನತ ತಂತ್ರಗಳನ್ನು ಪರಿಚಯಿಸಲಿದ್ದೇವೆ. ಮಂತ್ರಗಳ ಅವಶ್ಯಕತೆಯಿಲ್ಲದ ಉನ್ನತ ತಂತ್ರಗಳನ್ನು ಪರಿಚಯಿಸುತ್ತೇವೆ. ತಂತ್ರವನ್ನು ಮೀರಿಹೋಗುವುದಕ್ಕೆ ಮತ್ತೊಂದು ತಂತ್ರದ ಸಹಾಯ ಪಡೆಯುತ್ತೇವೆ ಎನ್ನುವುದು ವಿರೋಧಾಭಾಸದಂತೆ ತೋರುತ್ತದೆ!

ಈ ನಮ್ಮ ಮಾರ್ಗದಲ್ಲಿ, ಸಾಧನೆಯಲ್ಲಿನ ಕೆಲವು ಅಡಚಣೆಗಳನ್ನು ನಿವಾರಿಸುವುದಕ್ಕೆ ಸಹಾಯ ಮಾಡಲು ನಾವು ಪ್ರಯತ್ನಿಸುತ್ತೇವೆ. ನಮಗೆ ತಿಳಿದಿರುವ ಕೆಲವು ಅಡಚಣೆಗಳು ಇವೆ ಹಾಗೂ ನಾವು ತೆಗೆದು ಹಾಕಲೇಬೇಕಾದ ಬಹಳ ಗಂಭೀರವಾದ ಮತ್ತು ಮುಖ್ಯವಾದ ಅಡಚಣೆಗಳೂ ಕೆಲವಿವೆ. ಈ ಅಡಚಣೆಗಳನ್ನು ತೆಗೆದು ಹಾಕುವವರೆಗೂ ನಾವು ಸಾಧನೆಯಲ್ಲಿ ಮುನ್ನಡೆಯಲು ಆಗುವುದಿಲ್ಲ. ಖಂಡಿತವಾಗಿ ಬಹುದೊಡ್ಡ ಅಡಚಣೆಯೆಂದರೆ ಆಲಸ್ಯ, ಜಡತ್ವ. ಪತಂಜಲಿ ಮಹರ್ಷಿಗಳೂ ಇದರ ಬಗ್ಗೆ ಹೇಳಿದ್ದಾರೆ. ಅದನ್ನು ನಿವಾರಿಸುವ ದಾರಿಯನ್ನು ಹುಡುಕಲು ನಾವು ಪ್ರಯತ್ನಿಸುತ್ತಿದ್ದೇವೆ. ಅದಕ್ಕೆ ಪರಿಹಾರವನ್ನು ಇನ್ನೂ ಕಂಡುಕೊಳ್ಳಬೇಕಾಗಿದೆ!

ಜ್ಞಾನದ ತಿರುಚುವಿಕೆಯೂ ಒಂದು ಅಡಚಣೆಯೇ. ಸತ್ಯ ಯಾವಾಗಲೂ ಸರಳ, ಆದರೆ ಕೆಲವೊಮ್ಮೆ, ಅತಿ ಆಸಕ್ತಿಯಿಂದಾಗಿ ಅದರ ಬಗ್ಗೆ ಹೆಚ್ಚಾಗಿ ಮಾತನಾಡುತ್ತೇವೆ ಮತ್ತು ವರ್ಷಗಳು ಕಳೆದಂತೆ, ಅಂತಿಮವಾಗಿ ಪೂರ್ತಿ ಬೇರೆಯಾಗಿಯೇ ಮಾತನಾಡುತ್ತಿರುತ್ತೇವೆ!! ಆದ್ದರಿಂದಲೇ ನಾವು ಕಡಿಮೆ ಮಾತನಾಡಬೇಕು. "ಕಡಿಮೆ ಮಾತನಾಡಿ" ಎನ್ನುವುದು ಒಂದು ಮಂತ್ರವಿದ್ದಂತೆ. ಆದ್ದರಿಂದ, ನಾವು ಧ್ಯಾನವಮಾಡುವುದರಿಂದ, ಸರಿಯಾದ ಜ್ಞಾನವನ್ನು ಆರಿಸಿಕೊಂಡು, ತಿರುಚಿದ ಭಾಗವನ್ನು ದೂರ ಎಸೆಯುವುದು ಸುಲಭವಾಗುತ್ತದೆ. ಆದ್ದರಿಂದಲೇ, ಸ್ವಲ್ಪ ಧ್ಯಾನ ಮಾಡಿ ನಂತರ ಭಗವದ್ಗೀತೆಯನ್ನು ಓದಿ ಎಂದು ನಾನು ಹೇಳುವುದು. ಆಗ ಭಗವಾನ್ ಶ್ರೀ ಕೃಷ್ಣ ಹೇಳಿದ ಸಾರ ನಿಮಗೆ ತಿಳಿಯುತ್ತದೆ, ಬೇರೊಬ್ಬರು ಅದರ ಬಗ್ಗೆ ವ್ಯಾಖ್ಯಾನಿಸಿದ್ದಲ್ಲ.

ಭಾವೋದ್ರೇಕವು ಮತ್ತೊಂದು ಅಡಚಣೆ – ನಾವು ಭಾವುಕರಾಗಿರಬೇಕಾಗಿದ್ದರೂ ಕೂಡ. ದೇವರ ಬಗ್ಗೆ ಯೋಚಿಸುವಾಗ ಕೂಡ ನಾವು ಭಾವುಕರಾಗಬೇಕು. ಪ್ರೀತಿಯೂ ಒಂದು ಮಟ್ಟದಲ್ಲಿ ಭಾವುಕತೆಯೇ. ಆದರೆ ಭಾವುಕತೆಯನ್ನು ನಾವು ದಾಟಿಹೋಗಬೇಕು. ನಾವು ದೇವರಿಂದ ದೂರದಲ್ಲಿದ್ದೂ ಅವನಿಗೆ ಹತ್ತಿರವಾಗಿರಬಹುದೆಂದು ನನ್ನ ಗುರು ವಿವರಿಸಿದ್ದರು. ಅಮರ ಭೌತಿಕವಾಗಿ ಇಲ್ಲಿಲ್ಲವಾದರೂ ಅವರು ನನ್ನ ಹೃದಯದಲ್ಲಿದ್ದಾರೆ. ನಾವು ಅಂತಹ ಹಂತಗಳನ್ನು ತಲುಪಬೇಕು. ಭಾವುಕರಾದಾಗ ಅದು ನಮ್ಮನ್ನು ಒಂದು ಮಟ್ಟದಲ್ಲಿಯೇ ಹಿಡಿದಿಡುತ್ತದೆ ಯಾದ್ದರಿಂದಾಗಿ ಇದು ಅಡಚಣೆಯಾಗಿ ಪರಿಣಮಿಸುತ್ತದೆ.

ದೀರ್ಘಾವಧಿಯ ಧ್ಯಾನದ ನಂತರ, ಹಲವಾರು ವರ್ಷಗಳು ಧ್ಯಾನ ಮಾಡಿದ ನಂತರ, ಸಹಜವಾಗಿಯೇ ನಾವು ಕೆಲವೊಂದನ್ನು ಸಾಧಿಸಿಕೊಂಡಿರುತ್ತೇವೆ. ಖಂಡಿತವಾಗಿಯೂ ಧ್ಯಾನದಲ್ಲಿ ಕಳೆದ ಸಮಯಗಳು ನಮಗೆ ಹಲವಾರು ಪ್ರಯೋಜನಗಳನ್ನು ಕೊಟ್ಟಿರುತ್ತವೆ. ನಾವು ಹೆಚ್ಚು ಚೈತನ್ಯಗಳನ್ನು ಸಂಗ್ರಹಿಸುತ್ತೇವೆ. ಪರಿಶುದ್ಧತೆಯ ಉನ್ನತ ಹಂತವನ್ನು ತಲುಪುತ್ತೇವೆ. ನಿಶ್ಚಲತೆಯನ್ನು ಸಾಧಿಸುತ್ತೇವೆ. ಪರಿಪೂರ್ಣ ನಿಶ್ಚಲತೆಯನ್ನಲ್ಲ ದಿದ್ದರೂ ಹೆಚ್ಚು ಪ್ರಮಾಣದ ನಿಶ್ಚಲತೆಯನ್ನು ಗಳಿಸುತ್ತೇವೆ ಮತ್ತು ನಮ್ಮಲ್ಲಿ ಉಂಟಾಗುತ್ತಿರುವ ಆಧ್ಯಾತ್ಮಿಕ ಪ್ರಕ್ರಿಯೆಗಳನ್ನು ಬಲಗೊಳಿಸಿಕೊಳ್ಳುತ್ತೇವೆ. ಇವೆಲ್ಲವೂ ನಮ್ಮಲ್ಲಿ ಆದಾಗ ನಾವು ಪ್ರಗತಿ ಹೊಂದುತ್ತೇವೆ. ನಾವು ಈಗಾಗಲೇ ಪ್ರಗತಿ ಹೊಂದುತ್ತಿದ್ದೇವಾದರೂ ಇನ್ನೂ ಹೆಚ್ಚು ಪ್ರಗತಿ ಸಾಧಿಸಬಹುದಿತ್ತು. ಈ ದೀರ್ಘಾವಧಿ ಧ್ಯಾನಗಳು ನಮ್ಮಲ್ಲಿ ಬಹಳ ಶಾಂತಿಯನ್ನು ತರಬೇಕು. ಇವು ನಮ್ಮಲ್ಲಿ ವಿವೇಕವನ್ನು ತರಬೇಕು. ನಮ್ಮ ಮಾತುಗಳು ವಿವೇಕದ ಗಣಿಯೇ ಆಗಿರಬೇಕು. ನಾವು ಆಧ್ಯಾತ್ಮಿಕವಾಗಿ ಸದೃಢರಾಗಿರಬೇಕು. ಸತ್ಯದ ತರಂಗವನ್ನು ಹೊರಸೂಸುತ್ತಿರಬೇಕು. ಪ್ರೀತಿಯನ್ನು ಅಭಿವ್ಯಕ್ತಿಸುತ್ತಿರಬೇಕು, ಪೂರ್ಣವಾಗಲ್ಲದಿದ್ದರೂ ಕೊನೆಯಪಕ್ಷ ಭಾಗಶಃವಾದರೂ. ಆದರೆ ಅದೇಕೋ, ದೀರ್ಘಾವಧಿ ಧ್ಯಾನ ಮಾಡುತ್ತಿರುವ ಎಲ್ಲರಲ್ಲೂ ಇವುಗಳು ಉಂಟಾಗುವುದಿಲ್ಲ. ಹೀಗೇಕೆ ಎಂದು ಅರ್ಥಮಾಡಿಕೊಳ್ಳಲು ನಾವು ಪ್ರಯತ್ನಿಸುತ್ತೇವೆ. ಇದರ ಅಧ್ಯಯನ ಮಾಡುತ್ತೇವೆ. ನಮ್ಮ ಪ್ರಾಮಾಣಿಕ ಪ್ರಯತ್ನಗಳಿಂದ ಸಾಧಿಸಬೇಕಾಗಿದ್ದ ಪ್ರಗತಿಯನ್ನು ನಾವೇಕೆ ಸಾಧಿಸುತ್ತಿಲ್ಲ? ಭಾವನಾತ್ಮಕ ಮತ್ತು ಭೌದ್ಧಿಕ ಕ್ಷೋಭೆಗಳಿಗೆ ಅವಕಾಶ ಮಾಡಿಕೊಟ್ಟಾಗ, ನಾವು ಮಾಡುವ ಎಲ್ಲ ಪ್ರಯತ್ನಗಳೂ ವ್ಯರ್ಥವಾಗುತ್ತವೆಂದು ನನಗನ್ನಿಸುತ್ತದೆ. ಇಂತಹ ವಿಷಯಗಳನ್ನು ಅಮರರವರು ನಮಗೆ ಹೇಳಿದಾಗ, ಆ ಸಮಯದಲ್ಲಿ ನಮಗದು ಅರ್ಥವಾಗಲಿಲ್ಲ. ಅವರು ಹೇಳಿದರು, "ಒಂದು ವರ್ಷ ಮಾಡಿದ ಧ್ಯಾನದ ಪ್ರಯೋಜನವನ್ನು ನಾಶಮಾಡಲು ನಾವು ಒಮ್ಮೆ ಸಿಡಿಸಿದ ಕೋಪ ಸಾಕು". ನಮಗಿದು ತಿಳಿದಿಲ್ಲವೆಂದಲ್ಲ. ತಿಳಿದಿದ್ದರೂ ಇಂಥವುಗಳು ಘಟಿಸಲು ನಾವು ಕೆಲವೊಮ್ಮೆ ಅವಕಾಶ ಮಾಡಿಕೊಡುತ್ತೇವೆ. ನಾನು ಯಾರನ್ನೂ ಇಲ್ಲಿ ಜಡ್ಜ್ ಮಾಡುತ್ತಿಲ್ಲ. ನಾವು ವ್ಯಕ್ತಿಗತವಾಗಿ ಎಚ್ಚರಿಕೆಯಿಂದಿರಬೇಕು. ಇಂತಹ ವಿಷಯಗಳ ಬಗ್ಗೆ ಎಚ್ಚರದಿಂದಿರುವುದು ಮತ್ತು ಅರಿವಿನಿಂದಿರುವುದು ನಮ್ಮ ಸಾಧನೆಯ ಭಾಗವೇ. ನಾವು ಸೋತರೂ ಚಿಂತೆ ಮಾಡಬಾರದು. ಸೋಲು ಕೂಡ ಸಾಧನೆಯ ಭಾಗವೇ. ಪ್ರತಿಯೊಂದು ಬಾರಿ ಸೋತಾಗಲೂ ಮತ್ತೊಂದು ಹೊಸ ಪ್ರಯತ್ನ ಮಾಡೋಣ. ಹೆಚ್ಚು ಎಚ್ಚರಿಕೆಯಿಂದ ಇರೋಣ. ನಾವು ಹೀಗೇ ಕಲಿತು ಪ್ರಗತಿ ಹೊಂದುವುದು! ■

# ಶ್ರೀ ಜಯಂತ್ ದೇಶ್‌ಪಾಂಡೆಯವರ ಭಾಷಣದ ಆಯ್ದ ಭಾಗಗಳು

ಸಂ: ಶೋಭಾ ಕೆ. ರಾವ್; ಅನು: ಸುಧಾಕರ್

24ನೇ ನವೆಂಬರ್ 2019
(ಗುರೂಜಿ ಮಹಾಸಮಾಧಿ ಕಾರ್ಯಕ್ರಮ)

ಗುರೂಜಿಯವರು ಮಹಾ ಸಮಾಧಿಯಾಗುವ ಕೆಲವು ವಾರಗಳ ಮುಂಚೆ, ಅವರ ಆರೋಗ್ಯದಲ್ಲಿ ಸ್ವಲ್ಪ ಸುಧಾರಣೆ ಕಾಣಿಸಿದ್ದರಿಂದಾಗಿ ಅವರು ಹೆಚ್ಚು ದಿನ ಬದುಕಿರುತ್ತಾರೆಂದು ನಾವು ಆಲೋಚಿಸಿದ್ದೆವು. ನಾನು ಅವರಿಗೆ ಹೇಳಿದೆ, "ಗುರೂಜಿ, ಈಗ ಬಹಳಷ್ಟು ಭರವಸೆಯಿದೆ. ನೀವು ಬಹಳ ಕಾಲ ಬದುಕಿರುತ್ತೀರಿ." ಅವರು ಉತ್ತರಿಸಿದರು, "ನನ್ನ ಭಾಗದಿಂದ ನಾನು ಋಷಿಗಳಿಗೆ ಸಮರ್ಪಿಸಿಕೊಂಡಿದ್ದೇನೆ. ನನಗೇನಾದರೂ ಬೇಕಾಗಿದ್ದರೆ, ನನಗೆ ಆರೋಗ್ಯ ಸುಧಾರಿಸುವುದು ಬೇಕಾಗಿದ್ದರೆ, ಅದು ಹಾಗೆ ಆಗದಿದ್ದಾಗ ಸಹಜವಾಗಿಯೇ ನಿರಾಶೆಯುಂಟಾಗುತ್ತದೆ. ನಿರಾಶೆಯನ್ನು ಹೊತ್ತು ಋಷಿಗಳ ಬಳಿಗೆ ಹೋಗಲು ನನಗೆ ಇಷ್ಟವಿಲ್ಲ. ನಗುತ್ತಾ ಮತ್ತು ಪೂರ್ಣ ಸಿದ್ಧವಾಗಿ ಋಷಿಗಳ ಬಳಿಗೆ ಹೋಗುವುದನ್ನು ನಾನು ಬಯಸುತ್ತೇನೆ." ನಾನು ಯೋಚಿಸಿದೆ, "ಓ ದೇವರೇ, ಯಾವ ರೀತಿಯ ಚಿಂತನೆ ಮತ್ತು ಸಮರ್ಪಣೆ!" ಅವರಂತಹ ಮಹಾತ್ಮರಿಗೆ ಮಾತ್ರ ಈ ರೀತಿಯ ಸಿದ್ಧತೆ ಮಾಡಿಕೊಳ್ಳಲು ಸಾಧ್ಯ.

ಅವರ ಕೊನೆಯ ಉಸಿರಿನವರೆಗೂ ಋಷಿಗಳಿಗಾಗಿ ಕೆಲಸಮಾಡುವುದನ್ನು ಅವರು ಬಯಸಿದ್ದರು; ಮತ್ತು ಅದರಂತೆಯೇ ನಡೆದುಕೊಂಡರು. ಆಸ್ಪತ್ರೆಯ ಹಾಸಿಗೆಯಿಂದಲೇ ಅಸಾಮಾನ್ಯ ವಿವೇಕ ಮತ್ತು ಚೈತನ್ಯಗಳನ್ನು ನಮಗೆ ಹರಿಸಿದರು. ನಮಗೆ ಕಣ್ಣೀರನ್ನು ತಡೆಯಲಾಗದಿದ್ದಾಗ ಅವರು ನಮಗೆ ಸಾಂತ್ವನ ಹೇಳಿದರು ಮತ್ತು ನಮ್ಮೊಂದಿಗೆ ಅವರೂ ಅತ್ತರು. ಮಾನವ ಭಾಗ ಬಹಳ ಅಮೂಲ್ಯವಾದುದು, ಈ ಮಾನವ ಭಾಗವನ್ನು ಕಳೆದುಕೊಳ್ಳಬಾರದು ಎಂದು ಅವರು ಹೇಳುತ್ತಿದ್ದರು. ಅವರು ವಿವರಿಸಿದರು, "ಈ ಭೌತಿಕ ದೇಹದೊಂದಿಗೆ ಈ ಜನ್ಮದಲ್ಲಿ ನಾವು ಈ ರೀತಿಯಲ್ಲಿ ಭೇಟಿಯಾಗುವುದಿಲ್ಲವೆನ್ನುವುದು ವಾಸ್ತವ ಸಂಗತಿ. ಈ ಅರಿವು ನಮ್ಮನ್ನು ಭಾವುಕರನ್ನಾಗಿಸುತ್ತದೆ, ದುಃಖಿತರಾಗುತ್ತೇವೆ. ಸಹಜವಾಗಿ ಮುಂದಿನ ಜನ್ಮದಲ್ಲಿ ನಾವು ಭೇಟಿಯಾಗುತ್ತೇವೆ. ಆದರೆ ಅದು ಬೇರೆ ರೀತಿಯಲ್ಲಿರುತ್ತದೆ," ಅತ್ಯಂತ ಘನವಾದುದರ ಅನುಭವಪಡುತ್ತಿದ್ದಾಗ, ಅಲ್ಲಿ ಏಕೆ ದು:ಖದ ಛಾಯೆಯೂ ಇರುತ್ತದೆ ಎಂದು ಅತ್ಯಂತ ಸುಂದರವಾಗಿ ವಿವರಿಸಿ ಹೇಳಿದ್ದು ಅವರೇ, ಎಂದು ನನಗೆ ನೆನಪಿದೆ. ಉದಾಹರಣೆಗೆ ಸೂರ್ಯಾಸ್ತಮದ ಬಗ್ಗೆ ಯೋಚಿಸಿ. ಸೂರ್ಯಾಸ್ತವನ್ನು ನೋಡುವುದು ಒಂದು ಅದ್ವಿತೀಯ ಅನುಭವ. ಇದರ ಅನುಭವವನ್ನು ಸವಿಯುತ್ತಿದ್ದಾಗ ಅಲ್ಲಿ ದುಃಖದ ಛಾಯೆಯೂ ಇರುತ್ತದೆ ಎನ್ನುವುದನ್ನು ಬಹುಶಃ ನಾವೆಲ್ಲರೂ ಗಮನಿಸಿರಬಹುದು. ಬಹುಶಃ ಈ ವಾಸ್ತವಕ್ಕೆ ನಾವೆಂದೂ ಗಮನ ಕೊಟ್ಟಿರಲಾರೆವು. ಆದರೆ ಅವರು ವಿವರಿಸಿದರು, "ಈ ಕ್ಷಣ ತಾತ್ಕಾಲಿಕವೆಂದು ನಮಗೆ ತಿಳಿದಿರುವುದರಿಂದಾಗಿ ನಮಗೆ ಈ ರೀತಿಯ ಅನುಭವವಾಗುತ್ತದೆ. ಈ ಸೂರ್ಯಾಸ್ತಮವನ್ನು ನಾವು ಮತ್ತೊಮ್ಮೆ ನೋಡುವುದಿಲ್ಲ. ಮರುದಿನ ಅದು ಬೇರೆಯೇ ಆಗಿರುತ್ತದೆ, ಅದು ಹೊಸ ಅನುಭವ." ಬದುಕನ್ನು ಈ ಅತ್ಯಾಶ್ಚರ್ಯಕರ ದೃಷ್ಟಿಕೋನದಿಂದ ನೋಡುತ್ತಿದ್ದರು. ಅತ್ಯಂತ ಕ್ಲಿಷ್ಟಕರವಾದ ವಿಷಯಗಳನ್ನು ವಿವರಿಸುವ ಅದ್ಭುತ ವಿವೇಕ ಅವರಲ್ಲಿತ್ತು.

ಅವರು ಬದುಕಿದ ವಿಧಾನ ಅದ್ವಿತೀಯವಾಗಿತ್ತು. ಅವರನ್ನು ಅದ್ವಿತೀಯರನ್ನಾಗಿಸಿದ್ದು 'ಪ್ರೀತಿ'. ಅವರ ಕಾರಿನ ಚಾಲಕನಾಗಿರಬಹುದು ಅಥವ ಧ್ಯಾನಿಯಲ್ಲದ ಒಬ್ಬ ಸ್ನೇಹಿತನಾಗಿರಬಹುದು ಅಥವ ನಮ್ಮಲ್ಲಿ ಯಾರೇ ಆಗಿರಬಹುದು, ನಾವೆಲ್ಲರೂ ಅವರೊಂದಿಗೆ ವಿಶೇಷ ಸಂಬಂಧ ಹೊಂದಿದ್ದೆವು. ವೈಯಕ್ತಿಕವಾಗಿ ಅವರನ್ನು ಭೇಟಿಮಾಡದಿದ್ದ ಅವರ ವಿದ್ಯಾರ್ಥಿಗಳೂ ಕೂಡ ಅವರೊಂದಿಗೆ ಈ ವಿಶೇಷ ಸಂಬಂಧವನ್ನು ಹೊಂದಿದ್ದರು. ಈ ಸಂಬಂಧಗಳು ಅನಿರ್ಬಂಧಿತ ಪ್ರೀತಿಯ ಮೇಲೆ ನಿಂತಿದ್ದವು. ಅದೇ ಅವರನ್ನು ಅದ್ವಿತೀಯರನ್ನಾಗಿಸಿದ್ದು. ಅವರು ಅಕ್ಷರಶಃ ಪ್ರೀತಿಯ ತರಂಗಗಳನ್ನು ಹೊರಸೂಸುತ್ತಿದ್ದರು. ಅವರ ನಗು, ಅವರು ಮಾತನಾಡುತ್ತಿದ್ದ ವಿಧಾನ ಮತ್ತು ನಮ್ಮ ಪತ್ರಗಳು ಮತ್ತು ಇಮೇಲ್‌ಗಳಿಗೆ ಅವರು ಕೊಡುತ್ತಿದ್ದ ಉತ್ತರಗಳು ಕೂಡ ಪ್ರೀತಿಯಿಂದ ತುಂಬಿರುತ್ತಿದ್ದವು. ಗುರೂಜಿಯವರಿಗೆ ತಾವು ಪತ್ರ ಬರೆಯುತ್ತಿದ್ದುದಾಗಿ ಮತ್ತು ಅದಕ್ಕೆ ಗುರೂಜಿಯವರು ಬಹಳ ಸಂಕ್ಷಿಪ್ತವಾಗಿ ಉತ್ತರಿಸುತ್ತಿದ್ದುದಾಗಿ ವ್ಯಕ್ತಿಯೊಬ್ಬರು ನನಗೆ ಹೇಳಿದರು. ಆದರೂ, ಅವರ ಸಂಕ್ಷಿಪ್ತ ಉತ್ತರವು ಎಲ್ಲವನ್ನೂ ತಿಳಿಸುತ್ತಿತ್ತು. ಅದು ಪೂರ್ಣವಾಗಿರುತ್ತಿತ್ತು. ಕೆಲವೊಮ್ಮೆ ಕೇವಲ ಒಂದು ಅಥವ ಎರಡು ಪದಗಳಲ್ಲಿ ಉತ್ತರಿಸುತ್ತಿದ್ದರು ಮತ್ತು ಆ ಒಂದೆರಡು ಪದಗಳೇ ಎಲ್ಲವನ್ನೂ ಹೇಳುತ್ತಿತ್ತು, ಸಂದೇಶ ಪದಗಳಿಗಿಂತಲೂ ಹೆಚ್ಚು ಹೇಳುತ್ತಿತ್ತು. ಉತ್ತರಕ್ಕಾಗಿ ಅವರು ಪದಗಳನ್ನಷ್ಟೇ ಬಳಸುತ್ತಿರಲಿಲ್ಲ. ಪದಗಳೊಂದಿಗೆ ಚೈತನ್ಯಗಳನ್ನೂ ಕಳಿಸುತ್ತಿದ್ದರು, ಈ ಚೈತನ್ಯಗಳು ಸಂದೇಶವನ್ನು ಪೂರ್ಣವಾಗಿ ತಿಳಿಸುತ್ತಿತ್ತು. ಅವರ ಈ ಉತ್ತರಗಳೊಂದಿಗೆ ನಾವು ಎಷ್ಟೊಂದು ಪ್ರೀತಿಯನ್ನು ಪಡೆಯುತ್ತಿದ್ದೆವೆಂದರೆ ನಾವು ಉನ್ನತ ಮಟ್ಟಕ್ಕೆ ಏರಿದ ಅನುಭವವಾಗುತ್ತಿದ್ದುದರ ಜೊತೆಗೆ ಆ ಭಾವನೆಯಲ್ಲಿಯೇ ಬಹಳ ಸಮಯ ಉಳಿಯುತ್ತಿದ್ದೆವು. ಗುರೂಜಿಯವರು ಬರೆದ ಆ ಒಂದು ಪದದ ಉತ್ತರವನ್ನೇ, ಈ ವ್ಯಕ್ತಿಯು ಮತ್ತೆ ಮತ್ತೆ ಓದಿ ಸಂತೋಷಗೊಳ್ಳುತ್ತಿದ್ದರು. ಅವರ ಪ್ರೀತಿಯಲ್ಲಿ ಅಷ್ಟೊಂದು ಶಕ್ತಿಯಿತ್ತು.

ಅವರ ಕೊನೆಯ ಕೆಲವು ದಿನಗಳಲ್ಲಿ ಆಳವಾದ ಸತ್ಯಗಳನ್ನು ಹಂಚಿಕೊಂಡರು. ಅವರ ಮಾತುಗಳಲ್ಲಿಯೇ ಅವುಗಳನ್ನು ತಿಳಿಸುತ್ತೇನೆ. ಅವರು ಹೇಳಿದರು, "ನಾನು ದೇವರನ್ನು ಭೇಟಿಯಾಗಿದ್ದೇನೆ; ಏಂಜಲ್‌ಗಳನ್ನೂ ಭೇಟಿಯಾಗಿದ್ದೇನೆ. ನಾನು ಋಷಿಗಳನ್ನು ಭೇಟಿ ಮಾಡಿದ್ದೇನೆ ಮತ್ತು ಈ ಎಲ್ಲ ಮಟ್ಟಗಳಲ್ಲೂ ಸಹಾಯ ಮತ್ತು ಅನುಗ್ರಹಗಳನ್ನು ಪಡೆಯುತ್ತಿದ್ದೇನೆ. ನನಗೆ ಈ ಸಮಸ್ಯೆಯ ಬಗ್ಗೆ, ಕ್ಯಾನ್ಸರ್ ಬಗ್ಗೆ ತಿಳಿದಾಗ, ಅದನ್ನು ಆ ಕೂಡಲೇ ಒಪ್ಪಿಕೊಂಡೆ. ನಾನು ಸಿದ್ಧವಾಗಿದ್ದೇನೆಂದು ಋಷಿಗಳಿಗೆ ಹೇಳಿದೆ. ಈ ವಿವರಗಳು ನಿಮಗೆ ಮುಖ್ಯವಾಗುತ್ತವೆ. ದೇವರ ಎಲ್ಲ ನಿರ್ಧಾರಗಳನ್ನೂ ನೀವು ಒಪ್ಪಿಕೊಳ್ಳಬೇಕು. ನಮ್ಮ ಜೀವನದಲ್ಲಿ ನಡೆಯುವ ಎಲ್ಲದರ ಬಗ್ಗೆಯೂ ದೇವರಿಗೆ ತಿಳಿದಿರುತ್ತದೆ, ಇಂತಹ ಸಂಗತಿಗಳು ನಮ್ಮ ಜೀವನದಲ್ಲಿ ನಡೆಯುವುದು ದೇವರ ನಿರ್ಧಾರದಿಂದಲೇ ಎಂದು ನಾವು ಹೇಳಬಹುದು. ಆದ್ದರಿಂದ ಅದನ್ನು ದೇವರ ನಿರ್ಧಾರವೆಂದು ನಾವು ಒಪ್ಪಿಕೊಳ್ಳಬೇಕು. ದೇವರು ನನ್ನನ್ನು ಪ್ರೀತಿಸುತ್ತಾನಾದ್ದರಿಂದ ನಾನು ಆ ಕೂಡಲೇ ಅದನ್ನು ಒಪ್ಪಿಕೊಳ್ಳುತ್ತೇನೆ. ಜನರಿಗೆ ವಿಶ್ವಾತ್ಮಕ ಸತ್ಯಗಳು ತಿಳಿಯದಿರುವುದರಿಂದ ಅವರು ಕಷ್ಟಪಡುತ್ತಾರೆ. ಇದನ್ನು ಅವರು ಅರ್ಥ ಮಾಡಿಕೊಂಡರೆ ಯಾವುದೇ ಸಮಸ್ಯೆಗಳು ಇರುವುದಿಲ್ಲ, ಯಾವುದೇ ದೂರುಗಳಿರುವುದಿಲ್ಲ. ಮಹಾನ್ ಸತ್ಯಗಳು ದೇವರಿಂದಲೇ ಬರುತ್ತವೆ. ಇದು ನಮಗೆ ತಿಳಿದಿದ್ದರೆ, ಇದರ ಅರಿವು ನಮಗಾದರೆ, ನಾವು ವಿವೇಕಿಗಳಾಗುತ್ತೇವೆ. ನಾವು ಪ್ರತಿ ಬಾರಿ ಹುಟ್ಟಿಬಂದಾಗಲೂ, ಪ್ರತಿಯೊಬ್ಬರೂ ಕಲಿಯಬೇಕಾದ ಪಾಠಗಳಿರುತ್ತವೆ. ಮನುಕುಲವು ವಿಕಾಸಗೊಳ್ಳುವುದು ಹೀಗೇ. ಆದರೆ ಅದನ್ನು ನಮ್ಮಲ್ಲಿ ಅನೇಕರು ಕಲಿಯುವುದಿಲ್ಲ. ನಮಗೆ ಇಚ್ಛಾ ಸ್ವಾತಂತ್ರ್ಯವಿದೆ. ಕಲಿಯುವುದನ್ನು ನಾವು ಆಯ್ಕೆ ಮಾಡಿಕೊಳ್ಳಬಹುದು ಅಥವ ತಿರಸ್ಕರಿಸಬಹುದು. ಮೂಲಭೂತ ಸತ್ಯಗಳನ್ನು – ಈ ಭೂಮಿಯ ಮಟ್ಟದ ಸತ್ಯಗಳಷ್ಟನ್ನೇ ಅಲ್ಲದೆ ಈ ಇಡೀ ವಿಶ್ವದ ಸತ್ಯಗಳನ್ನು ಕಲಿಯಲು ಪ್ರತಿಯೊಬ್ಬರಿಗೂ ಅವಕಾಶಗಳನ್ನು ದೇವರು ಒದಗಿಸುತ್ತಾನೆ. ವಿಶ್ವಕ್ಕೆ ನಮ್ಮ ಬಗ್ಗೆ ಅತೀವ ಕಾಳಜಿಯಿದೆ. ಅದು ನಮ್ಮನ್ನು ಗಮನಿಸುತ್ತಿರುತ್ತದೆ, ಸಹಾಯ ಮಾಡುತ್ತಿರುತ್ತದೆ. ದಿವ್ಯವಾಗಿ ಅದು ನಮಗೆ ಸಹಾಯ ಮಾಡುತ್ತದೆ. ಎಲ್ಲವನ್ನೂ ನಿರ್ವಹಿಸುವ ಮಹಾನ್ ಶಕ್ತಿಯೊಂದಿದೆ."

ಅವರು ಮುಂದುವರಿದು ಹೇಳಿದರು, "ನಾವು ಕೆಲವರನ್ನು ಇಷ್ಟ ಪಡುತ್ತೇವೆ, ಕೆಲವರನ್ನು ಇಷ್ಟಪಡುವುದಿಲ್ಲ. ಕೆಲವರನ್ನು ದ್ವೇಷಿಸುತ್ತೇವೆ. ಇವುಗಳ ಮಟ್ಟವನ್ನು ಮೀರಿ ಮೇಲೇರುವ ಸಮಯ ಬಂದಿದೆ. ಈ ಜೀವನ ಒಂದು ಅವಕಾಶ. ಈ ಕಾಲ ಒಂದು ಅವಕಾಶ. ಸಾಮಾನ್ಯ ಮಾನವತ್ವವನ್ನು ಮೀರಿ ನಿಲ್ಲಿ. ದೇವರೇ ಅತಿ ಮುಖ್ಯವಾದ ವಿಶ್ವಾತ್ಮಕ ಸತ್ಯ. ಅವನನ್ನು ನಾವು ಒಪ್ಪಿಕೊಳ್ಳಬೇಕು. ಅವನು ನಮ್ಮ ಸೃಷ್ಟಿಕರ್ತ." ■

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರು – ವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲೀಷ್‌ನಲ್ಲಿ (ವರ್ಷಕ್ಕೆ ರೂ. 2500), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 1300) ಪಾಠಗಳನ್ನು ಕಳುಹಿಸಲಾಗುವುದು. ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ವಾರ್ಷಿಕ ರಿಜಿಸ್ಟ್ರೇಶನ್ ಫೀಯು ರೂ. 4500. ಈ ಫೀನಲ್ಲಿ ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಮತ್ತು ಪಠ್ಯಪುಸ್ತಕಗಳು ಸೇರಿದೆ.

ನಂತರ, ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫೀ ಇಂಗ್ಲೀಷ್ (ವರ್ಷಕ್ಕೆ ರೂ. 2000), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 900). ಭಾರತ ದೇಶದಿಂದ ಹೊರಗೆ ವಾಸವಾಗಿರುವ ವಿದ್ಯಾರ್ಥಿಗಳ ರಿಜಿಸ್ಟ್ರೇಶನ್‌ನ ವಾರ್ಷಿಕ ನವೀಕರಣದ ಫೀಯು ರೂ. 3500. ಈ ಫೀನಲ್ಲಿ ವಾರ್ತಾಪತ್ರದ ಒಂದು ವರ್ಷದ ಚಂದಾದಾರಿಕೆ ಸೇರಿದೆ.

- ★ ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
- ★ ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ★ ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ★ ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

ಚೆಕ್/ಡಿಡಿಗಳನ್ನು 'Manasa Light Age Foundation' ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.

### ಗುರೂಜಿಯವರಿಂದ ವಿಶೇಷ ಸೂಚನೆಗಳು

- ★ ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ★ ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ★ ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ★ ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ★ ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿ ಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಮಾಸ್ಟರ್ ಜೊತೆಗಿನ ಪಯಣ

**ಗುರೂಜಿ ಕೃಷ್ಣಾನಂದ; ಅನು: ಸುಜಾತ ವಿ**

**ಹನ್ನೊಂದು**

**('ಮಾನಸ ಪತ್ರದ' 1990ರ ಅಕ್ಟೋಬರ್ ಮತ್ತು ನವೆಂಬರ್ ಸಂಚಿಕೆಯಿಂದ)**

ಒಂದು ದಿವಸ ಅಮರರವರು ನನ್ನನ್ನು ಕರೆದರು. ಅವರು ಅಪೂರ್ವವಾದ ಸಂಭ್ರಮದಿಂದ ಪ್ರಕಾಶಿಸುತ್ತಿದ್ದರು.

"ನನ್ನ ಜೀವನದ ಸಾರ್ಥಕತೆಯನ್ನು ನಿನ್ನೆ ಕಂಡೆ!"

ಅವರು ಹೇಳಿದ್ದನ್ನು ನಾನು ಉಸಿರುಹಿಡಿದು ಕೇಳುತ್ತಿದ್ದೆ.

"ಆಗ ಸಂಜೆಯಾಗಿತ್ತು. ತಡೆದುಕೊಳ್ಳಲಾಗದ ನೋವಿತ್ತು. ಮನೆಯಲ್ಲಿ ಯಾರೂ ಇರಲಿಲ್ಲ. ಕೆಲವು ನಿಮಿಷಗಳ ಹಿಂದೆ ಎಮ್(M) ಕೂಡ ಅವಸರದ ಕೆಲಸದ ಮೇಲೆ ಹೊರಹೋಗಿದ್ದರು. ಆ ಹೊತ್ತಿನಲ್ಲಿ ನನಗೆ ಕೊಳಲ ನಾದ ಕೇಳಿಸಿತು. ಎಂತಹ ಮಧುರ ನಾದ! ಈ ಕಲಾವಿದ ಯಾರಿರಬಹುದೆಂದು ಯೋಚಿಸಿದೆ! ಯಾವ ರೇಡಿಯೋ ಸ್ಟೇಷನ್? ಅದು ಕಿಟಕಿಯ ಮುಖಾಂತರ ಬರುತ್ತಿತ್ತು. ನಾನು ಆ ಕಡೆ ತಿರುಗುವಷ್ಟರಲ್ಲಿ, ಎಮ್ ಒಳಗೆ ಬಂದರು. ಆಕೆ ತುಂಬಾ ಕೋಪದಲ್ಲಿದ್ದರು!"

"ಆಕೆ ಸಂಬಂಧವಿಲ್ಲದ ಬಹಳ ವಿಷಯಗಳ ಬಗ್ಗೆ ದೂರು ಹೇಳಲು ಆರಂಭಿಸಿದರು. ನಾನು ಆಕೆಯನ್ನು ಸಾಂತ್ವನಗೊಳಿಸಲು ಪ್ರಯತ್ನಿಸಿದೆ. ಆದರೆ ಆಕೆ ಹೊರಟು ಹೋಗಬೇಕೆಂದಿದ್ದರು! ನಮ್ಮನ್ನೆಲ್ಲಾ ಬಿಟ್ಟು! ನನಗೆ ಏನು ಮಾಡಬೇಕೆಂದು ಗೊತ್ತಾಗಲಿಲ್ಲ. ಆಕೆ ತುಳಿದ ಸಗಣಿಯನ್ನು ತೊಳೆದುಕೊಳ್ಳಲು ಸ್ನಾನಗೃಹಕ್ಕೆ ಹೋದರು. ಕೋಣೆಯು ಮತ್ತೆ ನಿಶ್ಶಬ್ದವಾಗಿತ್ತು. ಆಗ ಮತ್ತೊಮ್ಮೆ ನನಗೆ ಕೊಳಲ ನಾದ ಕೇಳಿಸಿತು. ಆದರೆ ಅದು ಸ್ನಾನಗೃಹದಿಂದ ಬರುತ್ತಿತ್ತು! ವಿಚಿತ್ರ! ನಾನು ಎಮ್ ಅವರನ್ನು ಕರೆದೆ. ಏನೂ ಪ್ರತಿಕ್ರಿಯೆ ಬರಲಿಲ್ಲ. ನಂತರ ನಾನು ಎದ್ದು ನಿಧಾನವಾಗಿ ಸ್ನಾನಗೃಹದ ಕಡೆಗೆ ನಡೆದೆ."

"ನಾನು ಸಗಣಿಯ ಗುರುತುಗಳನ್ನು ನೆಲದ ಮೇಲೆ ನೋಡಿದೆ. ನಂತರ ಅದು ಪ್ರಜ್ವಲಿಸಲು ಆರಂಭಿಸಿತು! ಎಮ್ ಸ್ನಾನಗೃಹದಲ್ಲಿ ಇರಲಿಲ್ಲ! ಕೊಳಲ ನಾದದ ಶಬ್ದ ಕೂಡ ಇರಲಿಲ್ಲ! ನನಗೆ ಅರ್ಥವಾಗಲಿಲ್ಲ. ನಾನು ನನ್ನ ಮಂಚಕ್ಕೆ ಹಿಂತಿರುಗಿದೆ. ಆನಂತರ ನಾನು ಪ್ರಕಾಶಮಾನವಾದ ಬೆಳಕನ್ನು ನೋಡಿದೆ ಮತ್ತು ಅದರಿಂದ ಭಗವಾನ್ ಕೃಷ್ಣ ಬರುವುದನ್ನು ಕಂಡೆ. ಅವನು ನನ್ನ ಮಂಚದ ಮೇಲೆ ಕುಳಿತು ಮುಗುಳ್ನಕ್ಕ. ನನ್ನ ನೋವು ಮಾಯವಾಯಿತು. ಅವನು ತುಂಬಾ ವಿಷಯಗಳ ಬಗ್ಗೆ ಮಾತನಾಡಿ ನಂತರ ಕಣ್ಮರೆಯಾದ."

"ಕೃಷ್ಣ ದರ್ಶನ ಕೊಟ್ಟ. ಮಾತನಾಡಿದ..."

ಅಮರರವರಿಗೆ ಈಗ ಮತ್ತೊಮ್ಮೆ ದರ್ಶನವಾಗುತ್ತಿದೆಯೇನೋ ಎಂಬಂತೆ ಅವರು ಮೌನದೊಳಗೆ ಹೋದರು. ಅವರ ಅನುಭವದ ಪ್ರಭೆಯಲ್ಲಿ ನಾನು ಮಂತ್ರಮುಗ್ಧನಾಗಿ ಕುಳಿತೆ.

ಫೆಬ್ರವರಿ 16, 1980 ರಂದು ಮಧ್ಯಾಹ್ನ 2ರ ಸಮಯದಲ್ಲಿ ನಾವು ಹಳ್ಳಿಯಲ್ಲಿದ್ದ ಅಮರರವರ ಜಾಗದಲ್ಲಿ ಸೇರಿದ್ದೆವು. ನಾವು ಸುಮಾರು ಏಳು ನೂರು ಜನರಿದ್ದೆವು. ಒಂದು ಶಾಮಿಯಾನವನ್ನು ಹಾಕಿದ್ದರು ಹಾಗು ಕಾರ್ಪೆಟ್‌ಗಳನ್ನು ಹಾಸಿದ್ದರು. ಮಧ್ಯಾಹ್ನ 2.24 ರಿಂದ 4.35ರ ಸಮಯದವರೆಗೂ ಇದ್ದ ಪೂರ್ಣ ಸೂರ್ಯ ಗ್ರಹಣದ ಸಮಯದಲ್ಲಿ ವಿಶೇಷ ಧ್ಯಾನ ಮಾಡಲು ಸಕಲ ಸಿದ್ಧತೆಯೂ ಆಗಿತ್ತು.

ಅನೇಕ ಅವಧಿಗಳಲ್ಲಿ ಅಭ್ಯಾಸ ಮಾಡಬೇಕಾಗಿದ್ದ ಧ್ಯಾನದ ಬಗ್ಗೆ ಸ್ಪಷ್ಟ ಸೂಚನೆಗಳನ್ನು ಮಧ್ಯಾಹ್ನ 2.22ರಲ್ಲಿ ಅಮರರವರು ಕೊಟ್ಟರು. ಅವರು ಹೇಳಿದರು – "ನಾವೆಲ್ಲಾ ಇಲ್ಲಿ ಸೇರಿರುವುದು ಮೊದಲನೆಯ ಬಾರಿ ಅಲ್ಲ. ಸುಮಾರು 51,000 ವರ್ಷಗಳ ಹಿಂದೆ ನಾವೆಲ್ಲಾ ಇಲ್ಲಿ ಇದ್ದೆವು, ಹಾಗೂ ವಿಶೇಷವಾದ ಚೈತನ್ಯಗಳನ್ನು ಪರಬ್ರಹ್ಮನಿಂದ ತರುವ ಆ ಋಷಿಗಳ ಕೆಲಸದಲ್ಲಿ ನಾವು ಪ್ರತಿಯೊಬ್ಬರೂ ಭಾಗವಹಿಸಿದ್ದೆವು. ನಾವು ಮಾನವರ ಪರವಾಗಿ ಇದನ್ನು ಸ್ವೀಕರಿಸುತ್ತೇವೆ ಮತ್ತು ಅವರು ಸಿದ್ಧರಾದಾಗ ಇದನ್ನು ಅವರಿಗೆ ಹಸ್ತಾಂತರಿಸುತ್ತೇವೆ. ಜೀಸಸ್ ನೀಡಿದ ದೇವರ ಸಾಮ್ರಾಜ್ಯದ ಭರವಸೆಗೆ ಮತ್ತು ಸತ್ಯ ಯುಗಕ್ಕೆ ಇದು ಅಡಿಪಾಯವಾಗಿದೆ. ಈ ದಿನ ಬಹಳ ಶ್ರೇಷ್ಠವಾದ ದಿನ."

ಧ್ಯಾನದ ನಂತರ ನಮ್ಮಲ್ಲಿ ಅನಿರ್ವಚನೀಯ ಮೌನ ಮತ್ತು ಸಂತೃಪ್ತಿ ತುಂಬಿದ್ದರಿಂದ ನಾವು ಯಾರೂ ಮಾತನಾಡಲಿಲ್ಲ. ನಾವು ಮೌನವಾಗಿ ಹಿಂತಿರುಗಿದೆವು. ಹಿಂತಿರುಗಿ ಬರುವಾಗ ಮೋಡದ ರೀತಿಯ ಎರಡು ವೃತ್ತಾಕಾರಗಳ ರಚನೆಗಳನ್ನು ಆಕಾಶದಲ್ಲಿ ನೋಡಿದೆ ಮತ್ತು ಅವು ಏನಿರಬಹುದೆಂದು ಆಶ್ಚರ್ಯಪಟ್ಟೆ. ಮಾರನೆಯ ದಿನ ಅವುಗಳ ಛಾಯಾಚಿತ್ರಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಿದ್ದರು. ಮದುರೈನಲ್ಲಿ ಜನರು ವೃತ್ತಾಕಾರಗಳ ಜೊತೆಗೆ ಹೊಂಬಣ್ಣದ ಬೆಳಕನ್ನು ನೋಡಿದ್ದರು. ನಿನ್ನೆ ಋಷಿಗಳು ಕೆಳಗೆ ತಂದ ವಿಶೇಷವಾದ ಚೈತನ್ಯಗಳು ಇವೇನಾ ಎಂದು ನಾನು ಅಮರರವನ್ನು ಕೇಳಿದಾಗ, ಅವರು "ಹೌದು, ಅದರ ಒಂದು ತುದಿ ಮಾತ್ರ," ಎಂದು ಹೇಳಿದರು.

ನನ್ನ ಗೆಳೆಯರೊಬ್ಬರು ವಿಶೇಷ ಧ್ಯಾನದ ಸೆಷನ್ನಿನ ಛಾಯಾಚಿತ್ರ ತೆಗೆಯಬೇಕೆಂದು ಬಯಸಿದರು ಮತ್ತು ಅದಕ್ಕಾಗಿ ಅಮರರವರ ಅನುಮತಿ ಕೋರಿದರು. ಅಮರರವರು ಅಪ್ಪಣೆಕೊಟ್ಟರು. ಭಾವಚಿತ್ರದಲ್ಲಿ ತಮ್ಮನ್ನು ಸೇರಿಸಬಾರದೆಂದು ನನ್ನ ಸ್ನೇಹಿತರನ್ನು ವಿನಂತಿಸಿದರು. ಆದರೆ ನನ್ನ ಗೆಳೆಯ ತುಂಬಾ ಉತ್ಸಾಹಶಾಲಿಯಾಗಿದ್ದರು. ಅವರು ಅಮರರವರನ್ನು ಅನೇಕ ಬಾರಿ ಕ್ಲಿಕ್ ಮಾಡಿದರು. ಅವರಿಗೆ ಪ್ರಿಂಟ್ ಸಿಕ್ಕಾಗ, ಭಾವಚಿತ್ರಗಳಲ್ಲಿ ಅಮರರವರು ಇಲ್ಲದಿರುವುದನ್ನು ಕಂಡರು. ಅಮರರವರ ಜಾಗದಲ್ಲಿ ಬರೀ ಕತ್ತಲೆಯ ರಾಶಿ ಎವೆಯಿಕ್ಕದೆ ಅವರನ್ನು ನೋಡುತ್ತಿತ್ತು. ಇದನ್ನು ಅಮರರವರಿಗೆ ಹೇಳಿದೆ. ಅವರು ಮುಗುಳ್ನಕ್ಕರು!

## ಪ್ರಶ್ನೋತ್ತರಗಳು

**(ಶ್ರೀ ಜಯಂತ್ ದೇಶ್‌ಪಾಂಡೆ)**

**ಸಂ: ಶೋಭಾ ಕೆ. ರಾವ್; ಅನು: ಪಾಂಡುರಂಗ**

**ಪ್ರ: ದುಃಖ, ಉದ್ವೇಗ ಮತ್ತು ಒತ್ತಡಗಳು ಭೌತಿಕ ಶರೀರದ ಮೇಲೆ ಪರಿಣಾಮವುಂಟುಮಾಡುವ ರೀತಿಯಲ್ಲಿಯೇ ಸೂಕ್ಷ್ಮ ಶರೀರದ ಮೇಲೂ ಪರಿಣಾಮವುಂಟುಮಾಡುತ್ತವೆಯೇ? ಅವುಗಳ ಲಕ್ಷಣಗಳೇನು?**

ಉ: ನಾವು ಅರ್ಥ ಮಾಡಿಕೊಂಡಿರುವಂತೆ ದುಃಖ ಅನ್ನುವುದು ನಮ್ಮ ಮನಸ್ಸಿನ ಸ್ಥಿತಿ. ನಾವು ದುಃಖ ಮತ್ತು ಒತ್ತಡಕ್ಕೆ ಒಳಗಾದಾಗ ಮನಸ್ಸಿನ ಮೇಲೆ ಪರಿಣಾಮವುಂಟಾಗುತ್ತದೆ. ಮನಸ್ಸಿನ ಮೇಲೆ ಪರಿಣಾಮವುಂಟಾದಾಗ ಇಡೀ ಶರೀರದ ಮೇಲೆ ಪರಿಣಾಮವುಂಟಾಗುತ್ತದೆ. ದುಃಖ ಮತ್ತು ಒತ್ತಡ ಶರೀರದಲ್ಲಿ ಖಾಯಿಲೆಗಳ ರೂಪದಲ್ಲಿ ಅಭಿವ್ಯಕ್ತಗೊಳ್ಳಬಹುದು. ಮತ್ತು ನಮಗೆ ಗೊತ್ತಿರುವಂತೆ ಮನಸ್ಸು ಸೂಕ್ಷ್ಮ ಶರೀರದ ಒಂದು ಭಾಗ. ಸಹಜವಾಗಿಯೇ ಸೂಕ್ಷ್ಮ ಶರೀರದ ಮೇಲೂ ಪರಿಣಾಮವುಂಟಾಗುತ್ತದೆ. ಖಾಯಿಲೆ ಮತ್ತು ದುಃಖಗಳೇ ಅದರ ಲಕ್ಷಣಗಳು.

**ಪ್ರ: ಅದು ಚಕ್ರಗಳ ಮೇಲೆ ಪರಿಣಾಮ ಬೀರುತ್ತದೆಯೇ?**

ಉ: ನಾನು ಅರ್ಥ ಮಾಡಿಕೊಂಡಿರುವಂತೆ, ಅದು ನೇರವಾಗಿ ಚಕ್ರಗಳ ಮೇಲೆ ಪರಿಣಾಮವುಂಟುವಮಾಡುವುದಿಲ್ಲ. ನಮ್ಮ ಶಾರೀರಿಕ ವ್ಯವಸ್ಥೆಯಲ್ಲಿನ ಈ ನಕಾರಾತ್ಮಕತೆ ಒಂದು ರೀತಿಯ ಅಶುದ್ಧತೆ. ಇದು ಚಕ್ರಗಳು ಚಾಲನೆಗೊಳ್ಳುವುದರ ಮೇಲೆ ಅಥವ ಚಕ್ರಗಳು ಕಾರ್ಯಮಾಡುವುದರ ಮೇಲೆ ಪರಿಣಾಮ ವುಂಟುಮಾಡುತ್ತದೆ. ನಾವು ಅರ್ಥ ಮಾಡಿಕೊಂಡಿರುವಂತೆ ನಮ್ಮ ಶರೀರವು ಶುದ್ಧವಾಗಿದ್ದಾಗ ಚಕ್ರಗಳು ಪೂರ್ಣವಾಗಿ ಕಾರ್ಯಮಾಡುತ್ತವೆ.

**ಪ್ರ: ನಾನು ನಿಯತವಾಗಿ ಧ್ಯಾನ ಮಾಡುತ್ತಿದ್ದರೂ, ಅದೇ ಹಂತದಲ್ಲಿಯೇ ಧ್ಯಾನ ಮುಂದುವರಿಸಲು ಹೇಳುತ್ತಾರೆ. ನಾನು ತಪ್ಪು ಮಾಡುತ್ತಿದ್ದೇನೆಯೇ ಅಥವಾ ನಾನು ಈ ಧ್ಯಾನ ಮಾರ್ಗಕ್ಕೆ ಸೂಕ್ತ ವ್ಯಕ್ತಿ ಅಲ್ಲವೇ?**

ಉ: ನಾವು ಬಹಳ ಬೇಗ ನಿರಾಶರಾಗುತ್ತೇವೆಂದು ನನಗೆ ಅನಿಸುತ್ತದೆ. ಈ ಮಾರ್ಗದಲ್ಲಿನ ಸಾಧನೆಯಾಗಿರಬಹುದು ಅಥವಾ ಬೇರೆ ಮಾರ್ಗದಲ್ಲಿನ ಸಾಧನೆಯಾಗಿರಬಹುದು, ಅದು ಕೇವಲ ಕೆಲವು ತಿಂಗಳುಗಳ ಪ್ರಯತ್ನ ಆಗಿರುವುದಿಲ್ಲ. ಕೆಲವೊಮ್ಮೆ ಸಾಧನೆ ಜನ್ಮಾಂತರಗಳವರೆಗೆ ವಿಸ್ತರಿಸಬಹುದು. ನಮಗೆ ನಾವೇ ಸ್ವಲ್ಪ ಸಮಯ ನೀಡಿಕೊಳ್ಳಬೇಕು, ಧ್ಯಾನದ ಬಗ್ಗೆ ಮತ್ತು ಮಾರ್ಗದಲ್ಲಿ ನಂಬಿಕೆ ಹೊಂದಿರಬೇಕು. ನಮ್ಮ ಆಧ್ಯಾತ್ಮಿಕ ಬೆಳವಣಿಗೆಯ ಬಗ್ಗೆ ಗುರೂಜಿ ಕೆಲವು ಸೂಚನೆಗಳನ್ನು ನೀಡಿದ್ದಾರೆ. ನಮಗೆ ನಿಯಮಿತವಾಗಿ ಧ್ಯಾನ ಮಾಡುವುದಕ್ಕೆ ಸಾಧ್ಯವಾಗುವುದಾದರೆ ನಾವು ಸರಿಯಾದ ದಾರಿಯಲ್ಲಿ ಚಲಿಸುತ್ತಿದ್ದೇವೆ ಮತ್ತು ಆಧ್ಯಾತ್ಮಿಕವಾಗಿ ಬೆಳೆಯುತ್ತಿದ್ದೇವೆ ಎನ್ನುವುದಕ್ಕೇ ಅದೇ ಸೂಚನೆ ಆಗಿರುತ್ತದೆ. ಅದೇ ಹಂತದಲ್ಲಿ ಮುಂದುವರಿಯಲು ಹೇಳಬಹುದು, ಆದರೂ ನಾವು ಪ್ರಗತಿ ಹೊಂದುತ್ತಿರುತ್ತೇವೆ. ನನಗೆ ಅನಿಸುವಂತೆ ಇಲ್ಲಿ ಯಾರು ಸಾಧನೆ ಮಾಡುತ್ತಿದ್ದಾರೋ ಅವರೆಲ್ಲರೂ ಈ ಮಾರ್ಗಕ್ಕೆ ಸೂಕ್ತರು.

**ಪ್ರ: ಗುರೂಜಿಯವರು ಮಹಾಸಮಾಧಿ ಹೊಂದಿದ ನಂತರವೂ, ನಾವು ಹೊಸ ತಂತ್ರಗಳನ್ನು (ಟೆಕ್ನಿಕ್) ಪಡೆಯುತ್ತಿದ್ದೇವೆಯೇ?**

ಉ: ಈ ಮುಂದುವರಿದ ಟೆಕ್ನಿಕ್‌ಗಳು ಹೊಸ ಯುಗಕ್ಕಾಗಿ ಮತ್ತು ನಾವು ಸಂಪೂರ್ಣವಾಗಿ ಹೊಸ ಯುಗವನ್ನು ಪ್ರವೇಶಿಸುವವರೆಗೂ ಯಾವುದೇ ರೀತಿಯ ಬದಲಾವಣೆಗಳ ಅವಶ್ಯಕತೆ ಇರುವುದಿಲ್ಲವೆಂದು ಗುರೂಜಿ ನಮಗೆ ಹೇಳಿದ್ದರು. ಆ ನಂತರ ಧ್ಯಾನ ಬೇಕಾಗುವುದಿಲ್ಲ. ಈಗ ನಾವು ಅಭ್ಯಾಸ ಮಾಡುತ್ತಿರುವ ಮುಂದುವರಿದ ಟೆಕ್ನಿಕ್‌ಗಳು ಬೆಳಕಿನ ಅನುಭವ ಪಡೆಯಲು ನಮಗೆ ಸಹಾಯ ಮಾಡುತ್ತವೆ. ಋಷಿಗಳು ಮತ್ತು ಗುರೂಜಿ ಕೆಳಗೆ ತಂದಿರುವ ಬೃಹತ್ ಪ್ರಮಾಣದ ಚೈತನ್ಯಗಳು ಈಗಾಗಲೇ ನಮ್ಮಲ್ಲಿ ಇವೆ, ಈ ಚೈತನ್ಯಗಳನ್ನು ನಾವು ಇನ್ನೂ ಪೂರ್ಣ ಪ್ರಮಾಣದಲ್ಲಿ ಬಳಕೆ ಮಾಡಿಕೊಂಡಿಲ್ಲ. ಮುಂದಿನ ತಲೆಮಾರುಗಳು ಸಹ ಈ ಚೈತನ್ಯಗಳ ಪ್ರಯೋಜನ ಪಡೆಯುತ್ತಾರೆ. ಆದರೆ ಹೊಸ ಚೈತನ್ಯಗಳ ಅವಶ್ಯಕತೆ ಉಂಟಾದಾಗಲೆಲ್ಲಾ ಋಷಿಗಳು ಬೇಕಾಗಿರುವ ಪ್ರಮಾಣದಲ್ಲಿ ಹೊಸ ಚೈತನ್ಯಗಳನ್ನು ಕೆಳತರುತ್ತಾರೆ, ನಮಗೆ ಅದರ ಅರಿವಿರಲಿ ಅಥವ ಇಲ್ಲದಿರಲಿ.

**ಪ್ರ: ಎಲ್ಲ ಜನ್ಮಗಳಲ್ಲೂ ನಮ್ಮ ಲಿಂಗ ಒಂದೇ ಇರುತ್ತದೆಯೇ?**

ಉ: ಹೌದು. ಆತ್ಮದ ಅವರೋಹಣ ಪುಸ್ತಕದಲ್ಲಿ ಗುರೂಜಿ ತಿಳಿಸಿರುವಂತೆ – ನಾವು ಭೌತಿಕ ಬ್ರಹ್ಮಾಂಡ ಪ್ರವೇಶಿಸುವ ಮೊದಲು ಬ್ರಹ್ಮ ಲೋಕದಲ್ಲಿ ಮನಸ್ಸನ್ನು ಪಡೆಯುವಾಗ ನಮ್ಮ ಲಿಂಗವನ್ನು ಆಯ್ಕೆ ಮಾಡಿಕೊಳ್ಳುತ್ತೇವೆ. ಮತ್ತು ಅದು ನಮ್ಮ ಎಲ್ಲ ಜೀವಿತಾವಧಿಗಳಲ್ಲಿ ನಮ್ಮ ಜೊತೆಯಲ್ಲಿ ಇರುತ್ತದೆ.


**ಪ್ರ: Channelled Knowledge from the Rishis Vol-4 ಪುಸ್ತಕದಲ್ಲಿ ರಾತ್ರಿ ಸಮಯದಲ್ಲಿ ಧ್ಯಾನದ ಹೊರತಾಗಿ ಬೇರೆ ಯಾವುದೇ ತಂತ್ರಗಳನ್ನು ಅಭ್ಯಾಸ ಮಾಡಬಾರದೆಂದು ಹೇಳಲಾಗಿದೆ. ನಾನು ಅರ್ಥ ಮಾಡಿಕೊಂಡಿರುವಂತೆ "ನಿಶೀತ ಕಾಲ"ದಲ್ಲಿ ನಾವು ಏನನ್ನೂ ಅಭ್ಯಾಸ ಮಾಡಬಾರದು. ಇದು ಸರಿಯೇ?**

ಉ: ಹೌದು, ಅದು ಸರಿ. ಬೆಳಿಗ್ಗೆ 1 ಘಂಟೆಯಿಂದ 3.30ರ ವರೆಗೆ ನಿಮ್ಮ ಹಂತದ ಧ್ಯಾನವನ್ನಲ್ಲದೇ ಬೇರೆ ಯಾವುದೇ ಅಭ್ಯಾಸ ಮಾಡುವುದನ್ನು ಬಿಟ್ಟುಬಿಡಿ. ■

## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| Higher Communication & Other Realities | 100/- |
| Light Body & Other Realities | 100/- |
| Master-Pupil Talks | 60/- |
| Master-Pupil Talks - Vol 2 | 75/- |
| iGuruji Vol 1,3,4 & 7 | each 150/- |
| iGuruji - Vol 2 | 120/- |
| iGuruji - Vol 5 | 100/- |
| iGuruji - Vol 6 | 75/- |
| Living in the Light of My Guru | 220/- |
| How to Meditate | 50/- |
| Dhyana Yoga | 50/- |
| Descent of Soul | 50/- |
| Practising Shambala Principles | 50/- |
| Astral Ventures of A Modern Rishi | 50/- |
| Channelled Knowledge from the Rishis-Vol 2 | 150/- |
| Channelled Knowledge from the Rishis-Vol 3 & 4 | each 200/- |
| Guruji Speaks Part - I & II | each 200/- |
| Guruji Speaks (Vol 3) | 150/- |
| Guruji Speaks (Vol 4) | 250/- |
| Guruji Speaks (Vol 5 & 7) | each 200/- |
| The Book of Reflections - Vol 1 & 2 | each 200/- |
| The Book of Reflections - Vol 3 | 150/- |
| Meditators on Meditations | 75/- |
| Meditators on Experiences | 75/- |
| Meditational Experiences - Vol 1 & 2 | each 150/- |
| Awareness | 60/- |
| Living in Light | 10/- |
| Light | 10/- |
| Quotes from the Rishis - Vol 1 & 2 | each 100/- |
| Pyramid Revelations | 100/- |
| Thus Spoke Guruji Krishnananda - Vol 1 & 4 | each 200/- |
| Thus Spoke Guruji Krishnananda - Vol 2 & 3 | each 250/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಋಷಿಗಳಿಂದ ಬಂದ ಜ್ಞಾನ – ಭಾಗ 2 | 150/- |
| ಗುರು–ಶಿಷ್ಯರ ಸಂಭಾಷಣೆ | 60/- |
| ಐ–ಗುರೂಜಿ ಭಾಗ 1 | 150/- |
| ಐ–ಗುರೂಜಿ ಭಾಗ 2 | 120/- |
| ಹೊಸ ಯುಗದ ವಾಸ್ತವಗಳು | 120/- |
| ಉನ್ನತ ಸಂಪರ್ಕಗಳು | 100/- |
| ಅನಿಸಿಕೆಗಳು | 120/- |
| ಧ್ಯಾನ ಮಾಡುವುದು ಹೇಗೆ | 50/- |
| ಧ್ಯಾನ ಯೋಗ | 50/- |
| ಆತ್ಮದ ಅವರೋಹಣ | 50/- |
| ಶಂಬಲ ನಿಯಮಗಳ ಅಭ್ಯಾಸ | 50/- |
| ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | 50/- |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ಬೆಳಕಿನ ಶರೀರ ಮತ್ತು ಇತರ ವಾಸ್ತವಗಳು | 100/- |
| प्रकाशवाट (Marathi) | 150/- |
| आय्‌गुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्त्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| उच्चस्तरीय संवाद आणि इतर सत्ये (Marathi) | 100/- |
| गुरु–शिष्य संवाद (Marathi) | 60/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| आत्मा का अवतरण (Hindi) | 50/- |
| தியானம் செய்வது எப்படி | 50/- |
| ஒளியின் வாயில்கள் | 200/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| కాంతికి ద్వారములు | 100/- |

Published: 21st of Every Month. RNI. No. KARKAN/2003/13739 Regd. Postal Regn. No. KARN/BGE/1124/ 2017-2019
Date of posting Newsletter-25th or 27th or 29th of Every Month. Posted at Bangalore PSO, Bg-560026 No. of Pages-8



ಗುರೂಜಿ ಕೃಷ್ಣಾನಂದ (1939 - 2012)

### ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ತಪೋನಗರ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('Manasa Foundation' ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80-G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

## ಸಾಧಕರ ಆಧ್ಯಾತ್ಮಿಕ ಅನುಭವಗಳು ಮತ್ತು ಅವರ ಪತ್ರಗಳಿಂದ ಆಯ್ದ ಭಾಗಗಳು

ಸಂ. ಶೋಭಾ ಕೆ. ರಾವ್; ಅನು: ಸ್ವರ್ಣಲತಾ

ನನ್ನ ಜೀವನದಲ್ಲಿ ಬರುವ ತೊಂದರೆಗಳು ಹಾಗು ಸೋಲುಗಳಿಗೆ ಕಾರಣಗಳನ್ನು ಅರ್ಥ ಮಾಡಿಕೊಳ್ಳಲು ನನಗೆ ಸಾಧ್ಯವಾಗಿದೆ. ಹಾಗಿದ್ದರೂ, ನಾನು ಯಾವಾಗಲೂ ಶಾಂತಿಯಿಂದಿದ್ದೇನೆ.

–ರಾಜಲಕ್ಷ್ಮಿ. ಆರ್

ನಾನು ಧ್ಯಾನ ಮಾಡುತ್ತಿದ್ದಾಗ, ಒಂದೆರೆಡು ಸಂದರ್ಭಗಳಲ್ಲಿ ನಮ್ಮ ಕಟ್ಟಡದ ಸುತ್ತಲಿನ ಜಾಗದಲ್ಲಿ ಹಾವುಗಳಿರುವುದರ ಬಗ್ಗೆ ನಿಖರವಾಗಿ ತಿಳಿದು ಬಂದಿತ್ತು. ಆದರೆ ನಾನು ಎಂದೂ ಅವುಗಳನ್ನು ಕಂಡಿರಲಿಲ್ಲ. ಕಟ್ಟಡದ ಸುತ್ತ ಎಲ್ಲಕಡೆ ಕಾಂಕ್ರೀಟ್ ಇದ್ದು, ಗಿಡಗಳಿಗೆ ಬಹಳ ಸ್ವಲ್ಪವೇ ಜಾಗವಿದ್ದರೂ ಅಲ್ಲಿ ಹಾವುಗಳ ಇರುವಿಕೆಯ ಬಗ್ಗೆ ಆಶ್ಚರ್ಯವೆನಿಸಿತು. ಇತ್ತೀಚೆಗೆ ನನ್ನ ಕಟ್ಟಡದ ಹಿಂಬದಿಯ ಗುಡಿಸಿಲಿನಲ್ಲಿ ವಾಸವಾಗಿದ್ದ ಒಬ್ಬ ಮಹಿಳೆ ಹಾವಿನ ಕಡಿತದಿಂದ ಸಾವನ್ನಪ್ಪಿದ್ದು ತಿಳಿದು ಬಂತು. ಸುಮಾರು ಅದೇ ಸಮಯದಲ್ಲಿ ನಮ್ಮ ವಿದ್ಯುತ್ ಬಾಕ್ಸ್‌ನೊಳಗೆ ಸಹ ಹಾವು ಕಂಡುಬಂತು. ಇದರಿಂದ ನನ್ನ ಧ್ಯಾನದಲ್ಲಿ ಕಂಡದ್ದು ನಿಜವೆಂದು ದೃಢಪಟ್ಟಿತು!

ಇತ್ತೀಚೇಗೆ ನನ್ನ ಧ್ಯಾನದಲ್ಲಿ, ಯಾವುದೋ ಗೊತ್ತಿಲ್ಲದ ಜಾಗದಲ್ಲಿ ನಾನು ಆಳವಾಗಿ ಧ್ಯಾನಮಾಡುತ್ತಿದ್ದುದನ್ನು ಕಂಡೆ. ಬಾಗಿಲು ಮುಚ್ಚಿದ್ದರೂ ಕೂಡ ಕೊಠಡಿಯ ಹೊರಗಿನದೆಲ್ಲವೂ ನನಗೆ ಕಾಣಿಸುತ್ತಿತ್ತು. ಪ್ರಕಾಶಮಾನವಾದ ಬಿಳಿಯ ಜ್ವಾಲೆ, ಹೊಂಬಣ್ಣದ ಕಿರಣಗಳನ್ನು ಹೊಮ್ಮಿಸುತ್ತಾ ಕಟ್ಟಡದ ಹೊರಗಿನ ಆಲದ ಮರದಿಂದ ಹೊರಬರುವುದು ಕಂಡಿತು. ನಂತರ ಅದು ಆಕಾಶದೆಡೆಗೆ ಸಾಗಿತು. ಮರುದಿನವೇ ಆ ಆಲದ ಮರ ಕಾರಣವೇ ಇಲ್ಲದೆ, ಬುಡಸಮೇತ ಪಕ್ಕದ ಕಟ್ಟಡದ ಕಡೆ ಬಾಗಿ ಕೆಳಗೆ ಬಿದ್ದಿತ್ತು. ಆದರೆ ಕಟ್ಟಡಕ್ಕೆ ಹೆಚ್ಚಿನ ಹಾನಿಯೇನೂ ಆಗಿರಲಿಲ್ಲ.

–ರಾಜೇಂದ್ರ ರಂಗ್ನೇಕರ್

ಈ ತ್ರೈಮಾಸದ ಮೊದಲ ಭಾಗದಲ್ಲಿ ನನ್ನ ಧ್ಯಾನ ಅಷ್ಟೇನೂ ಚೆನ್ನಾಗಿರಲಿಲ್ಲ. ಇತ್ತೀಚೆಗೆ ತಪೋನಗರಕ್ಕೆ ಭೇಟಿಕೊಟ್ಟ ನಂತರ ನನ್ನನ್ನು ಮತ್ತೊಮ್ಮೆ ಹೊಸದಾಗಿ ಮಾರ್ಗದರ್ಶಿಸಿದಂತೆನಿಸಿತು. ಮತ್ತೆ ಧ್ಯಾನಮಾಡಲು ಉತ್ಸಾಹ ಮೂಡಿತು. ನಾನು ಶಂಬಲ ನಿಯಮಗಳನ್ನು ಮೊದಲು ಕರ್ತವ್ಯವೆಂದು ಅಭ್ಯಾಸ ಮಾಡುತ್ತಿದ್ದೆ. ಆದರೆ ಈಗ ಹೊಸ ಚೈತನ್ಯದೊಂದಿಗೆ ಅವುಗಳನ್ನು ಅಭ್ಯಾಸ ಮಾಡಲು ಇಷ್ಟವಾಗುತ್ತದೆ.

–ನಿರ್ಮಲ. ಜೆ

ಶಾಂತಿಯುತವಾದ ಸಂತೋಷಕರ ಜೀವನಕ್ಕೆ ಶಂಬಲ ನಿಯಮಗಳನ್ನು ಅಭ್ಯಾಸ ಮಾಡುವುದೊಂದೇ ದಾರಿ ಎಂದು ಅರ್ಥವಾಗಿದೆ. ನನ್ನ ಹಿಂದಿನ ಜೀವನವನ್ನು ಪರಾಮರ್ಶಿಸಿದಾಗ ಅವುಗಳು ನಾನು ಎಷ್ಟು ಎತ್ತರಕ್ಕೆ ಬೆಳೆಯಲು ಸಹಾಯವಾಗಿವೆ ಎಂಬುದು ತಿಳಿಯುತ್ತದೆ. ಇದನ್ನು ಅರ್ಥ ಮಾಡಿಕೊಳ್ಳಲು ನನಗೆ 21 ವರ್ಷಗಳೇ ಬೇಕಾದವು. ಹೌದು, ಈಗ ನಾನು ಬದಲಾಗಿದ್ದೇನೆ. ಋಷಿಗಳು ಹಾಗು ಗುರೂಜಿಯವರ ತಾಳ್ಮೆ ಹಾಗೂ ಊಹಿಸಲಾಗದ ಪ್ರೀತಿಗೆ ನನ್ನ ಹೃತ್ಪೂರ್ವಕ ನಮಸ್ಕಾರಗಳು. ಇಷ್ಟಾದರೂ, ಸೂಕ್ಷ್ಮವಾಗಿ ನನಗೇ ತಿಳಿಯದ ಹಾಗೆ ಅಹಂ ತಲೆ ಎತ್ತುತ್ತದೆ. ನಾನು ಅತ್ಯಂತ ಎಚ್ಚರಿಕೆಯಿಂದಿರಬೇಕು. ಜೀವನ ನಿಜವಾಗಿಯೂ ಅತ್ಯಂತ ಸುಂದರವಾಗಿದೆ! ಸವಾಲುಗಳು ನಮ್ಮ ಬೆಳವಣಿಗೆಗೆ ಸಹಕರಿಸುವ ಉಡುಗೊರೆಗಳು. ನಾನು ಅವುಗಳನ್ನು ಸ್ವಾಗತಿಸಿ ವಂದಿಸುತ್ತೇನೆ. ಶಾಶ್ವತವಾದ ಕೃತಜ್ಞತೆಗಳನ್ನು ಅವುಗಳಿಗೆ ಅರ್ಪಿಸುತ್ತೇನೆ.

–ಮೈತ್ರೇಯಿ ಶಶಾಂಕ್

ನನ್ನ ಧ್ಯಾನದಲ್ಲಿ, ಹಗುರವಾದ ಮತ್ತು ವಿಸ್ತರಣೆಗೊಂಡ ಅನುಭವವಾಗುತ್ತದೆ. ಕೆಲವು ಸಲ ನಾನು ವಿಶಾಲವಾದ ಆಕಾಶದೊಂದಿಗೆ ಐಕ್ಯವಾಗುತ್ತಿರುವಂತೆ ಅನ್ನಿಸುತ್ತದೆ.

–ನರೇಂದ್ರ ಕುಮಾರ್ ಧನ್‌ಕರ್

ಆಗಸ್ಟ್ 29, 2019ಕ್ಕೆ ಋಷಿಗಳ ಈ ಮಾರ್ಗದಲ್ಲಿ ನಾನು 15 ವರ್ಷಗಳನ್ನು ಪೂರೈಸಿದ್ದೇನೆ. ಇಷ್ಟು ಕಾಲ ತೆಗೆದುಕೊಂಡಿತು, ಆದರೆ ಈಗ ನಾನು ಮನುಷ್ಯನಾಗಿದ್ದೇನೆ. ಆನೇಕ ವರ್ಷಗಳ ಹಿಂದೆ ನಾನು ಕೋಪಿಷ್ಟನಾಗಿದ್ದೆ ಹಾಗು ಅಶಾಂತ ಮನಸ್ಸನ್ನು ಹೊಂದಿದ್ದೆ. ಈಗ ನಾನು ಅತ್ಯಂತ ಶಾಂತಿಯಿಂದಿದ್ದೇನೆ, ಕೋಪ ಇಲ್ಲವಾಗಿದೆ.

ನನ್ನಲ್ಲಾಗಿರುವ ಅತ್ಯಂತ ಸುಂದರ ಬೆಳವಣಿಗೆಯೆಂದರೆ, ಆಯ್ಕೆ ಮಾಡುವುದು ಸುಲಭವಾಗುತ್ತಿದೆ. ಅನಾಯಾಸವಾಗಿ ಮತ್ತು ವಿವೇಚನೆಯಿಂದ ಆಯ್ಕೆ ಮಾಡಿಕೊಳ್ಳಲು ಎಷ್ಟೊಂದು ಚೈತನ್ಯವನ್ನು ಕೊಟ್ಟಿದ್ದಾರೆಂದು ಆಶ್ಚರ್ಯವಾಗುತ್ತದೆ. ಸಪ್ತ ಋಷಿ ಮಾರ್ಗ ಹಾಗೂ ಮಾನಸ ಫೌಂಡೇಶನ್ ಉತ್ಕೃಷ್ಟವಾದದ್ದು. ಇದು, ಧ್ಯಾನಿಯ ಬೆಳವಣಿಗೆಯು ಸ್ವಾತಂತ್ರ್ಯದ ಅಧಾರದ ಮೇಲೆ ನಿಂತಿದೆಯೆನ್ನುವುದಕ್ಕೆ ಒಂದು ಅತ್ಯುತ್ತಮ ಉದಾಹರಣೆ. ಗುರೂಜಿಯವರು, ದೇವರು ಎಲ್ಲರಿಗೂ ಹೇಗೆ ಸ್ವಾತಂತ್ರ್ಯ ಕೊಟ್ಟಿದ್ದಾನೆಂಬ ವಿಷಯದ ಬಗ್ಗೆ ಒತ್ತು ಕೊಡುತ್ತಿದ್ದರು. ಆದರೆ ನಾವು ಸರಿಯಾದದ್ದನ್ನೇ ಆರಿಸಿಕೊಳ್ಳಬೇಕು.

ನನ್ನ ಎಷ್ಟೋ ಮಿತಿಗಳನ್ನು ಮೀರಿ ನಾನು ಬೆಳೆದಿದ್ದೇನೆ. ಅವುಗಳೆಲ್ಲ ನನ್ನನ್ನು ಹೇಗೆ ಬಿಟ್ಟು ಹೋದುವೆಂಬುದೇ ಅರ್ಥವಾಗುತ್ತಿಲ್ಲ! ಇದು, ಗುರೂಜಿ ಹೇಳುತ್ತಿದ್ದ ಹಾಗೆ, ಒಣಗಿದ ಎಲೆಗಳು ಮರದಿಂದ ತಾನಾಗಿಯೇ ಉದುರಿ ಹೋಗುವ ಹಾಗೆ.

–ನಿಖಿಲ್ ಗಾಂಧಿ

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.300/–
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ – 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ ಎ, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು–560086. ಫೋನ್: 23359992
ಸಂಪಾದಕರು : ಶ್ಯಾಮಲಾ ದೇವಿ